
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಧರ್ಮಶಾಲಾದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ನಡೆದ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ 33 ಎಸೆತದಲ್ಲಿ ಭರ್ಜರಿ ಅಜೇಯ ಅರ್ಧ ಶತಕ ಗಳಿಸಿದ 93 ರನ್ ಗಳಿಸಿದ ರಾಯಲ್ ಚಾಲೆಂಜಸ್ ್ ಬೆಂಗಳೂರು ತಂಡದ ನಾಯಕ ರಜತ್ ಪಾಟಿದರ್... ಆರ್‌ಸಿಬಿ 20 ಓವರ್‌ನಲ್ಲಿ 5 ವಿಕೆಟ್ ಕಳೆದಕೊಂಡು 254 ರನ್ ಗಳಿಸಿದೆ.

27 ಮೇ, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 77 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಜೀವನ ಪಾಠ ಕಲಿಸುವ ಶಾಕ್ ಕೊಡುವ ಸ್ಟೋರಿಗಳು ! » 2



ಅರಕಲಗೂಡು ತಾಲ್ಲೂಕಿನಲ್ಲಿ ಮಳೆ ಕೊರತೆ : ರೈತರಿಗೆ ಸಂಕಷ್ಟ 3



ಹೆತ್ತೂರು ಕಾಫಿ ಬ್ರಾಂಡ್ ರಾಷ್ಟ್ರ ಮಟ್ಟದಲ್ಲಿ ಬೆಳೆಯಲಿ » 4

# ಅಧಿಕಾರ ಹಸ್ತಾಂತರ : ಹೈಕಮಾಂಡ್‌ಗೆ ಕಗ್ಗಂಟು

- ಸಿಎಂ–ಡಿಸಿಎಂ ಜೊತೆ ರಾಹುಲ್ ಗಾಂಧಿ ಒನ್ ಟು ಒನ್ ಮಾತುಕತೆ
- ರಾಷ್ಟ್ರ ರಾಜಕಾರಣ ಆಹ್ವಾನ ಒಪ್ಪದ ಮುಖ್ಯಮಂತ್ರಿ ಸಿದ್ದರಾಮಯ್ಯ

• ಪ್ರಜೋದಯ ವರದಿ

**ನವದೆಹಲಿ:** ನಾಯಕತ್ವ ಬದಲಾವಣೆಯ ಚರ್ಚೆ ಕಾಂಗ್ರೆಸ್ ಹೈಕಮಾಂಡ್ ಅಂಗಳಕ್ಕೆ ತಲುಪಿದ್ದು, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಮಂಗಳವಾರ ಮ್ಯಾರಥಾನ್ ಸಭೆ ನಡೆಸಿದರು.

ದೆಹಲಿಯ ಇಂದಿರಾ ಭವನದಲ್ಲಿ ರಾಹುಲ್ ಗಾಂಧಿ ಹಾಗು ಮುಖ್ಯಮಂತ್ರಿ ಸಿದ್ದರಾಮಯ್ಯ ನಡುವೆ ಪ್ರತ್ಯೇಕ ಸಭೆ ನಡೆಯಿತು. ಸುಮಾರು 45 ನಿಮಿಷಗಳ ಕಾಲ ಉಭಯ ನಾಯಕರ ಸಭೆ ನಡೆದಿದ್ದು, ಈ ವೇಳೆ ನಾಯಕತ್ವ ಬದಲಾವಣೆ ಬಗ್ಗೆ ಗಂಭೀರ ಚರ್ಚೆಯಾಗಿದೆ. ಇನ್ನು ಸಾಧಕ-ಬಾಧಕಗಳ ಬಗ್ಗೆಯೂ ಸಹ ಸಿದ್ದರಾಮಯ್ಯ ಅವರು, ರಾಹುಲ್ ಗಾಂಧಿಗೆ ಮಾಹಿತಿ ನೀಡಿದ್ದಾರೆಂದು ತಿಳಿದುಬಂದಿದೆ.

ಸುದೀರ್ಘ ಚರ್ಚೆಯಲ್ಲಿ ರಾಹುಲ್ ಗಾಂಧಿ ಅವರು, ನಾಯಕತ್ವ ಬದಲಾವಣೆ ಸಂಬಂಧ ಸಿದ್ದರಾಮಯ್ಯ ಅವರಿಗೆ ರಾಜ್ಯಸಭೆ ಆಫರ್ ನೀಡಿದ್ದಾರೆಂದು ತಿಳಿದುಬಂದಿದೆ. ಆದರೆ, ಇದಕ್ಕೆ ಸಿದ್ದರಾಮಯ್ಯ ಯಾವುದೇ ಆಫರ್‌ಗೆ ಸಮ್ಮತಿಸಿಲ್ಲ ಎನ್ನಲಾಗಿದೆ.



**ರಾಷ್ಟ್ರ ರಾಜಕಾರಣಕ್ಕೆ ಆಹ್ವಾನ**

ನಾಯಕತ್ವ ಬದಲಾವಣೆ ಬಿಕ್ಕಟ್ಟನ್ನು ಸೌಹಾರ್ದಯುತವಾಗಿ ಬಗೆಹರಿಸಲು ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರಿಗೆ ರಾಜ್ಯಸಭಾ ಸದಸ್ಯತ್ವದ ಜೊತೆಗೆ ಕೇಂದ್ರದಲ್ಲಿ ಪಕ್ಷದ ಪ್ರಮುಖ ಜವಾಬ್ದಾರಿ ವಹಿಸುವ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ. ಈ ಪ್ರಸ್ತಾಪವನ್ನು ಸಿದ್ದರಾಮಯ್ಯ ಅವರು ತಕ್ಷಣಕ್ಕೆ ಒಪ್ಪಿಕೊಳ್ಳಲು ನಿರಾಕರಿಸಿದ್ದಾರೆ. ಕರ್ನಾಟಕದ ರಾಜಕಾರಣದಲ್ಲೇ ಮುಂದುವರಿಯಲು ತಮಗೆ ಹೆಚ್ಚಿನ ಆಸಕ್ತಿ ಇರುವುದಾಗಿ ಅವರು ಹೈಕಮಾಂಡ್ ನಾಯಕರಿಗೆ ತಿಳಿಸಿದ್ದಾರೆ ಎನ್ನಲಾಗಿದೆ. ಅಲ್ಲದೆ ಸದ್ಯಕ್ಕೆ ತಾವೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದು, ಈಗಲೇ ಯಾವುದೇ ಪ್ರಮುಖ ನಿರ್ಧಾರ ಕೈಗೊಳ್ಳುವುದು ಸೂಕ್ತವಲ್ಲ ವೆಂಬ ವಾದವನ್ನು ಅವರು ಮಂಡಿಸಿದ್ದಾರೆಂದು ತಿಳಿದುಬಂದಿದೆ.



" ಕರ್ನಾಟಕದ ನಾಯಕತ್ವ ಬದಲಾವಣೆ ವಿಷಯ ಸಭೆಯಲ್ಲಿ ಚರ್ಚೆಯಾಗಿಯೇ ಇಲ್ಲ. ನಾವು ಕೇವಲ ಮುಂಬರುವ ರಾಜ್ಯಸಭೆ ಚುನಾವಣೆ ಹಾಗು ವಿಧಾನ ಪರಿಷತ್ ಚುನಾವಣೆ ಕುರಿತು ಮಾತ್ರ ಮಾತುಕತೆ ನಡೆಸಿದ್ದೇವೆ.

-ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

**ನಾಯಕತ್ವ ಬದಲಾವಣೆ ಚರ್ಚಿಸಿಲ್ಲ**

ಸುದೀರ್ಘ ಸಭೆಯ ಬಳಿಕ ಹೊರಬಂದ ನಾಯಕರು ಜಂಟಿ ಸುದ್ದಿಗೋಷ್ಠಿ ನಡೆಸಿದರು. ಈ ವೇಳೆ ಮಾತನಾಡಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ವಿವರವಾದ ಸಭೆ ನಡೆಸಿದ್ದೇವೆ. ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕರ್ನಾಟಕದ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಮತ್ತು ನಾನು ಭಾಗವಹಿಸಿದ್ದೇವು. ಇಂದು ಇಡೀ ಚರ್ಚೆಯು ಮುಂಬರುವ ರಾಜ್ಯಸಭಾ ಚುನಾವಣೆ ಮತ್ತು ಕರ್ನಾಟಕದ ವಿಧಾನ ಪರಿಷತ್ ಚುನಾವಣೆಗಳ ಮೇಲೆ ಮಾತ್ರ ಕೇಂದ್ರೀಕೃತವಾಗಿತ್ತು. ಕರ್ನಾಟಕದ ನಾಯಕತ್ವ ಬದಲಾವಣೆ ಯಾವುದೇ ವಿಷಯ ಚರ್ಚೆಯಾಗಿಲ್ಲ, ನೀವು ಏನೇ ಊಹಾಪೋಹ ಮಾಡುತ್ತಿದ್ದರೂ ಅದು ಕೇವಲ ಊಹಾಪೋಹ. ವಾಸ್ತವವೇ ಬೇರೆ ಎಂದರು.

ಕರ್ನಾಟಕದ ರಾಜ್ಯಸಭಾ ಸ್ಥಾನಗಳು ಮತ್ತು ಪರಿಷತ್ ಸ್ಥಾನಗಳ ಬಗ್ಗೆ ಚರ್ಚಿಸಿದ್ದೇವೆ. ಛತ್ತೀಸ್‌ಗಢ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಜಾರ್ಖಂಡ್‌ನಂತಹ ಇತರೆ ಸ್ಥಾನಗಳ ಜೊತೆಗೆ ಕರ್ನಾಟಕದ ರಾಜ್ಯಸಭಾ ಮತ್ತು ಪರಿಷತ್ ಸ್ಥಾನಗಳ ಅಭ್ಯರ್ಥಿಗಳನ್ನು ಶೀಘ್ರ ಘೋಷಿಸಲಾಗುವುದೆಂದು ಹೇಳಿದರು.

**6 ಗಂಟೆ ನಡೆದ ಮ್ಯಾರಾಥಾನ್ ಸಭೆ**

ಬೆಳಿಗ್ಗೆ 11 ಗಂಟೆಗೆ ಆರಂಭವಾದ ಹೈಕಮಾಂಡ್ ಸಭೆ ಸಂಜೆ 5.30ರವರೆಗೂ ಸುದೀರ್ಘವಾಗಿ ನಡೆಯಿತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ , ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಸರಣಿ ಚರ್ಚೆ ನಡೆಸಿದರು. ಈ ನಡುವೆ ರಾಹುಲ್ ಗಾಂಧಿ ಅವರು ಸಿಎಂ ಮತ್ತು ಡಿಸಿಎಂ ಜೊತೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ ಮಹತ್ವದ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ.

## ಪ್ರತ್ಯೇಕ ಸಭೆ ನಡೆಸಿದರೆ ತಪ್ಪೇನು: ಈಶ್ವರ್ ಖಂಡ್ರೆ



• ಪ್ರಜೋದಯ ವರದಿ

**ಹಾಸನ:** ದೆಹಲಿಯಲ್ಲಿ ಹೈಕಮಾಂಡ್ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪ್ರತ್ಯೇಕ ಸಭೆ ನಡೆಸಿದರೆ ತಪ್ಪೇನಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಹೇಳಿದರು.

ನಗರ ಹೊರವಲಯದ ಗೆಂಡೆಕಟ್ಟೆ ಅರಣ್ಯದ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಹಾಗು ಉಪಮುಖ್ಯ ಮಂತ್ರಿ ಅವರೊಂದಿಗೆ ರಾಹುಲ್ ಗಾಂಧಿ ಸಭೆ ನಡೆಸಿದ ವಿಚಾರದಲ್ಲಿ ಮಾಧ್ಯಮದವರು ಗೊಂದಲಕ್ಕೊಳಗಾಗಿದ್ದಾರೆ. ದೆಹಲಿಯಲ್ಲಿ ರಾಜ್ಯಸಭೆ ಹಾಗು ವಿಧಾನ ಪರಿಷತ್ ಚುನಾವಣೆಗಳ ಹಿನ್ನಲೆ ಚರ್ಚೆಗಳು ನಡೆದಿವೆ. ಈ ಬಗ್ಗೆ ಚರ್ಚೆ ಅನಾವಶ್ಯಕವೆಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಬದಲಾವಣೆ ಕುರಿತು ಕೆಲ ಕಾಂಗ್ರೆಸ್ ಶಾಸಕರ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರೆಲ್ಲಾ ನಮ್ಮ ಸರ್ಕಾರದ ಶಾಸಕರೇ. ನಾನು ಸರ್ಕಾರದ ಒಂದು ಭಾಗವಾಗಿ ಹೇಳುವುದಾದರೆ ಸರ್ಕಾರ ಬಹಳ ಗಟ್ಟಿಯಾಗಿದೆ. ಉತ್ತಮವಾಗಿ ಕೆಲಸ ಮಾಡುತ್ತಿದ್ದೇವೆ. ಮಾಧ್ಯಮದವರು ಅಭಿವೃದ್ಧಿ ಮತ್ತು ಸರ್ಕಾರದ ಸಾಧನೆಗಳ ಬಗ್ಗೆ ಪ್ರಶ್ನೆ ಕೇಳಿ. ಮಾಜಿ ಸಚಿವ ರಾಜಣ್ಣ ಅವರ ಹೇಳಿಕೆ ಬಗ್ಗೆ ಅವರನ್ನೇ ಕೇಳಿ. ಈಗಾಗಲೇ ಹೇಳಿದ್ದೇನೆ, ಈಗ ಈ ಚರ್ಚೆ ಅನಾವಶ್ಯಕ, ಅಪ್ರಸ್ತುತ ಎಂದರು.

## ಶೆಡ್‌ಗಳ ತೆರವಿಗೆ ವಿರೋಧ : ಅಧಿಕಾರಿಗಳೊಂದಿಗೆ ವಾಗ್ವಾದ

**ತಡೆಯಾಜ್ಞೆ ಇರುವ ನಾಲ್ಕು ಶೆಡ್ ಹೊರತು ಪಡಿಸಿ ಉಳಿದವುಗಳಿಗೆ ಬೀಗ**

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಹರ್ಡಿಕರ್ ವೃತ್ತದ ಸಮೀಪ ತಾಲ್ಲೂಕು ಪಂಚಾಯಿತಿಗೆ ಸೇರಿದ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಲು ಅಧಿಕಾರಿಗಳು ಮುಂದಾದ ವೇಳೆ ವ್ಯಾಪಾರಸ್ಥರು ಮಾತಿನ ಚಕಮಕಿ ನಡೆಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸತೀಶ್ ಅವರ ನೇತೃತ್ವದಲ್ಲಿ,ಪೊಲೀಸ್ ಭದ್ರತೆಯೊಂದಿಗೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಶೆಡ್‌ಗಳ ತೆರವಿಗೆ ಮುಂದಾದಾಗ ಅಧಿಕಾರಿಗಳು–ವ್ಯಾಪಾರಿಗಳ ನಡುವೆ ವಾಗ್ವಾದ ಏರ್ಪಟ್ಟು ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಅಂಗಡಿಗಳನ್ನು ತೆರವುಗೊಳಿಸಿದರೆ ಜೀವನ ಸಂಕಷ್ಟಕ್ಕೆ ಸಿಲುಕುತ್ತದೆ. ನಮಗೆ ವಿಷ ಕುಡಿಯುವುದನ್ನು ಬಿಟ್ಟರೆ ಬೇರೆ ದಾರಿ ಇಲ್ಲವೆಂದು ಭಾವುಕರಾಗಿ, ಅಂಗಡಿಗಳಿಗೆ ಬೀಗ ಹಾಕಲು ಅಧಿಕಾರಿಗಳಿಗೆ ಅವಕಾಶ ನೀಡದೆ ಪ್ರತಿಭಟಿಸಿದರು.



ನ್ಯಾಯಾಲಯದ ತಾತ್ಕಾಲಿಕ ತಡೆಯಾಜ್ಞೆ ಇರುವ ನಾಲ್ಕು ಶೆಡ್‌ಗಳನ್ನು ಹೊರತುಪಡಿಸಿ ಉಳಿದ ಮಳಿಗೆಗಳಿಗೆ ಅಧಿಕಾರಿಗಳು ಬೀಗ ಮುದ್ರೆ ಹಾಕಿದರು. ಈ ಸಂದರ್ಭದಲ್ಲಿ ಪಿಎಸ್‌ಐ ಎಸ್.ಜಿ.ಪಾಟೀಲ್, ತಾಲೂಕು ಪಂಚಾಯಿತಿ ಅಧಿಕಾರಿಗಳಾದ ತೋಪೇಗೌಡ, ನಂದಕುಮಾರ್, ಸಂತೋಷ್, ವಿಶ್ವನಾಥ್ ಸೇರಿ ಹಲವರಿದ್ದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸತೀಶ್ ಅವರು ಮಾತನಾಡಿ, ತಾಲ್ಲೂಕು ಪಂಚಾಯಿತಿಗೆ ಸೇರಿದ ಮಳಿಗೆಗಳು ಹಲವು ವರ್ಷಗಳಿಂದ ಹರಾಜಾಗದೇ ಖಾಲಿ ಇದ್ದವು. ಅವುಗಳನ್ನು ತೆರವುಗೊಳಿಸಿ ಸುಮಾರು 54 ಲಕ್ಷ ಬಿಡ್‌ಗೆ ಹರಾಜು ಮಾಡಲಾಗಿದೆ. ಅದೇ ಜಾಗದ ಪಕ್ಕದಲ್ಲಿ ಕೆಲವು ಮಂದಿ ಯಾವುದೇ ಬಾಡಿಗೆ ಪಾವತಿಸದೆ ಅನಧಿಕೃತವಾಗಿ ಶೆಡ್‌ಗಳನ್ನು ನಿರ್ಮಿಸಿಕೊಂಡು ವ್ಯಾಪಾರ ನಡೆಸುತ್ತಿದ್ದಾರೆ. ಈ ಜಾಗವನ್ನು ತೆರವುಗೊಳಿಸಿ ಹೊಸ ಮಳಿಗೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಇದು ಪುರಸಭೆಯ ಆಸ್ತಿಯಲ್ಲ, ತಾಲೂಕು ಪಂಚಾಯಿತಿಗೆ ಸೇರಿದ ಜಾಗವಾಗಿದೆ. ಆಸ್ತಿ ಸಂಬಂಧಿಸಿದ ಯಾವುದೇ ದಾಖಲೆಗಳು ಕೆಲವರ ಬಳಿ ಇಲ್ಲದಿದ್ದರೂ ತಪ್ಪು ಮಾಹಿತಿ

» ನಾಲ್ಕನೇ ಪುಟದಲ್ಲಿ

# ದುರ್ಬಲ ಹೈಕಮಾಂಡ್‌ನಿಂದಲೇ ಅಧಿಕಾರಕ್ಕಾಗಿ ಕಿತ್ತಾಟ

**ಜನರ ಪಾಲಿಗೆ ರಾಜ್ಯ ಸರ್ಕಾರ ಸತ್ತಿದೆ : ಕಾಂಗ್ರೆಸ್ ವಿರುದ್ಧ ಆರ್.ಅಶೋಕ್ ವಾಗ್ದಾಳಿ**

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿರುವ ಕಿತ್ತಾಟವನ್ನು ತಡೆಯಲು ಕಾಂಗ್ರೆಸ್ ಹೈಕಮಾಂಡ್ ದುರ್ಬಲವಾಗಿದೆ. ಜನರ ಪಾಲಿಗೆ ರಾಜ್ಯ ಸರ್ಕಾರ ಸತ್ತಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ವಾಗ್ದಾಳಿ ನಡೆಸಿದರು.

ನಗರದ ಪ್ರವಾಸಿ ಮಂದಿರಲ್ಲಿ ಮಂಗಳವಾರ ನಡೆದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಸಂಬಳ ನೀಡಲು ಹಣವಿಲ್ಲ, ರೈತರು ಮಳೆ ಕೊರತೆಯಿಂದ ಸಂಕಷ್ಟದಲ್ಲಿದ್ದಾರೆ. ಕೆಎಸ್‌ಆರ್‌ಟಿಸಿ ನೌಕರರು, ಅಂಗನವಾಡಿ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದಾರೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಮುಖ್ಯಮಂತ್ರಿ ಸೇರಿ ಸಚಿವರು ಅಧಿಕಾರ ಉಳಿಸಿಕೊಳ್ಳಲು ದೆಹಲಿಯಲ್ಲಿದ್ದಾರೆಂದು ಟೀಕಿಸಿದರು.



ದೆಹಲಿಯಲ್ಲಿರುವ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಇಬ್ಬರನ್ನು ಪ್ರತ್ಯೇಕವಾಗಿ ಕೊಠಡಿಯಲ್ಲಿ ಕೂಡಿ ಹಾಕಿ ಸಭೆ ಮಾಡಿದ್ದಾರೆ. ಆದರೆ, ಸಿದ್ದರಾಮಯ್ಯ ತಮ್ಮ ಸ್ಥಾನ ಉಳಿಸಿಕೊಳ್ಳಲು ಹಿಂದಿನ ರಾಜಕೀಯ ಅನುಭವದ ತಂತ್ರಗಾರಿಕೆಯನ್ನು ಈಗಲೂ ಬಳಸುತ್ತಿದ್ದಾರೆ. ಹೀಗಾಗಿ ಡಿ.ಕೆ.ಶಿವಕುಮಾರ್ ಅವರಿಗೆ ಖಾಲಿ ತಟ್ಟೆಯೇ ಗತಿ, ಬರಿಗೈನಲ್ಲಿ ವಾಪಾಸ್ಸಾಗುತ್ತಾರೆ. ಡಿ.ಕೆ.ಶಿವಕುಮಾರ್ 136 ಸ್ಥಾನ ಗೆದ್ದಿದ್ದೇವೆಂದು ಹೇಳಿಕೊಳ್ಳುವುದನ್ನು ಬಿಟ್ಟು ಮೊದಲು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲಿ ಎಂದು ವ್ಯಂಗ್ಯವಾಡಿದರು.

ಪೆಟ್ರೋಲ್–ಡೀಸೆಲ್ ದರ ಏರಿಕೆ ಕುರಿತು ಕಾಂಗ್ರೆಸ್ ನಾಯಕರು ಕೇಂದ್ರ ಸರ್ಕಾರದ ವಿರುದ್ಧ ನಡೆಸುತ್ತಿರುವ ಪ್ರತಿಭಟನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯ ಸರ್ಕಾರವೇ ತೆರಿಗೆ ಹೆಚ್ಚಳದ ಮೂಲಕ ಸಾವಿರಾರು ಕೋ. ರೂ. ಆದಾಯ ಪಡೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಾಕತ್ತಿದ್ದರೆ ತೈಲ ಬೆಲೆ ಏರಿಕೆಯಿಂದ ರಾಜ್ಯಕ್ಕೆ ಎಷ್ಟು ಆದಾಯ ಬರುತ್ತಿದೆ ಎಂಬುದನ್ನು ಬಹಿರಂಗ

» ನಾಲ್ಕನೇ ಪುಟದಲ್ಲಿ

**ಮೇ 29ರಂದು ಭಟ್ಕಳ ಚಲೋ**

ಭಟ್ಕಳದಲ್ಲಿ ದೇವರ ಕಟ್ಟೆ ಧ್ವಂಸ ಮಾಡಲು ಯತ್ನಿಸಿ, ಜನರ ಮೇಲೆ ಹಲ್ಲೆ ನಡೆಸಿದ ಘಟನೆಯನ್ನು ಖಂಡಿಸಿ ಮೇ 29ರಂದು ಭಟ್ಕಳ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹಿಂದೆ ಅಳಂದದಲ್ಲಿ ಪೊಲೀಸರ ಮೇಲೆ ದಾಳಿ ನಡೆಸಿದ ಪ್ರಕರಣಗಳನ್ನು ಸರ್ಕಾರ ಹಿಂಪಡೆದ ಪರಿಣಾಮ ಇಂತಹ ಘಟನೆಗಳು ಮರುಕಳಿಸುತ್ತಿವೆ. ಮುಸ್ಲಿಂ ಓಲೈಕೆ ಹಾಗು ಮತಬ್ಯಾಂಕ್ ರಾಜಕಾರಣದಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿದರು.

**ರಾಜ್ಯಸಭೆ ಸದಸ್ಯರ ಆಯ್ಕೆ ಪಕ್ಷದ ತೀರ್ಮಾನ**

ಮುಂಬರುವ ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆಯ ಬಗ್ಗೆ ಉಸ್ತುವಾರಿಗಳೊಂದಿಗೆ ಚರ್ಚಿಸಲಾಗಿದೆ. ಅಂತಿಮ ತೀರ್ಮಾನವನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳಲಿದ್ದಾರೆ. ಬಿಜೆಪಿಗೆ ರಾಜ್ಯಸಭೆ ಸದಸ್ಯ ಸ್ಥಾನ ನೀಡಬೇಕೆಂಬುದು ನಮ್ಮ ಬೇಡಿಕೆಯಾಗಿದೆ. ಅಂತಿಮವಾಗಿ ರಾಷ್ಟ್ರೀಯ ನಾಯಕರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಅಥವಾ ಹಾಲಿ ಅಧ್ಯಕ್ಷರನ್ನೇ ಮುಂದುವರಿಸುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಪಕ್ಷದ ತೀರ್ಮಾನಕ್ಕೆ ನಾವು ಬದ್ಧರಾಗಿರುತ್ತೇವೆಂದು ಆರ್. ಅಶೋಕ್ ಅವರು ಹೇಳಿದರು.

# ಸೌಕರ್ಯ ಕಲ್ಪಿಸುವವರೆಗೂ ನಿವೇಶನ ಹಂಚಿಕೆಗೆ ಬಿಡಲ್ಲ

**ಬಿಜಿಎಸ್‌ಕೆ ಬಡಾವಣೆ ನಿರ್ಮಾಣಕ್ಕೆ ಭೂ ಮಾಲೀಕರ ಎಚ್ಚರಿಕೆ**

• ಪ್ರಜೋದಯ ವರದಿ

**ಹಾಸನ:** ಬಿಜಿಎಸ್‌ಕೆ ಹೊಸ ಬಡಾವಣೆಗೆ ಮೂಲಭೂತ ಸೌಕರ್ಯ ಕಲ್ಪಿಸುವವರೆಗೂ ನಿವೇಶನ ಹಂಚಿಕೆ ಮಾಡಲು ಬಿಡುವುದಿಲ್ಲವೆಂದು ಭೂಮಿ ನೀಡಿರುವ ರೈತರು, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸ್ವಾಮಿಗೌಡ ಅವರು ಎಚ್ಚರಿಕೆ ನೀಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೂವನಹಳ್ಳಿ, ಗೇಕರವಳ್ಳಿ, ಸಮುದ್ರವಳ್ಳಿ ಮತ್ತು ಕೆಂಚಟ್ಟಹಳ್ಳಿ ಒಳಗೊಂಡ ಬಿಜಿಎಸ್‌ಕೆ ಬಡಾವಣೆಗೆ ರಸ್ತೆ, ಬೀದಿ ದೀಪ, ಒಳಚರಂಡಿ ಸೇರಿ ಯಾವುದೇ ಕಾಮಗಾರಿ ಪೂರ್ಣಗೊಂಡಿಲ್ಲ. 7 ವರ್ಷಗಳಿಂದಲೂ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿದೆ. ನಾವು ಇನ್ನೂ ಆರು ತಿಂಗಳು ಕಾಯುತ್ತೇವೆ. ಅಷ್ಟರೊಳಗೆ





ಅಭಿವೃದ್ಧಿ ಕೆಲಸ ಮುಗಿದ ನಂತರ ನಿವೇಶನ ಹಂಚಿಕೆ ಮಾಡಲಿ, ಅಲ್ಲಿಯವರೆಗೂ ತರಾತುರಿಯಲ್ಲಿ ಹಂಚಿಕೆ ಮಾಡುವುದು ಬೇಡವೆಂದರು.

ಕೆಲವು ರೈತರ ಉಳಿಕೆ ಜಮೀನನ್ನು ಹುಡಾ ವಹಿಸಿಕೊಂಡಿಲ್ಲ. ಆಟದ ಮೈದಾನದ ಜೊತೆಗೆ ಮೂಲಭೂತ ಸೌಕರ್ಯ ಅಭಿವೃದ್ಧಿಯಾಗಿಲ್ಲ. ಕೆಲವು ಕಡೆ ಜಮೀನು ಸಮತಟ್ಟು ಮಾಡದೆ ಅವೈಜ್ಞಾನಿಕವಾಗಿ ನಿವೇಶನ ಮಾಡಲಾಗಿದೆ. ನಿವಾಸಿಗಳಿಗೆ ಅನುಕೂಲವಾಗುವಂತೆ ಪಾರ್ಕ್, ಸಿಎ ನಿವೇಶನ, ಸ್ಮಶಾನ ಅಭಿವೃದ್ಧಿ ಪಡಿಸುವ ಬಗ್ಗೆ ನಕ್ಷೆಯಲ್ಲಿ ತೋರಿಸಿಲ್ಲ. ಜನರಿಂದ ಹಣ ಕಟ್ಟಿಸಿಕೊಂಡು ಇಷ್ಟು ವರ್ಷ ಕಾಯಿಸಿ ಅವರಿಗೆ ಯಾವುದೇ ಸೌಲಭ್ಯ ಕಲ್ಪಿಸದೆ ಹಂಚಿಕೆ ಮಾಡಿದರೆ ಹೇಗೆಂದು ಪ್ರಶ್ನಿಸಿದರು.

ಈಗಾಗಲೇ ಹುಡಾದಿಂದ ಅಭಿವೃದ್ಧಿ ಪಡಿಸಿರುವ ಎಸ್.ಎಂ. ಕೃಷ್ಣ ಬಡಾವಣೆಯಲ್ಲಿ ಯುಜಿಡಿ ಸರಿಯಾಗಿ ನಿರ್ವಹಿಸದೆ ಬೂವನಹಳ್ಳಿ ಕೆರೆಗೆ ಕಲುಷಿತ ನೀರು ಹರಿದು ಪರಿಸರ ಹಾಳಾಗುತ್ತಿದೆ. ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಇಲ್ಲ.

» ನಾಲ್ಕನೇ ಪುಟದಲ್ಲಿ

" ಬಡಾವಣೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹೆಸರು ಇಡಬೇಕೆಂಬುದು ನಮ್ಮ ಮೂಲ ಉದ್ದೇಶವಾಗಿತ್ತು. ಆದರೆ, ಬಿಜಿಎಸ್‌ಕೆ ಬಡಾವಣೆ ಎಂದು ಹೆಸರಿಡಲು ರೈತರೊಂದಿಗೆ ಚರ್ಚೆಯೇ ಮಾಡಿಲ್ಲ. ಇದೀಗ ನಿವೇಶನ ಹಂಚಿಕೆ ವಿಷಯದಲ್ಲೂ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಲಾಗಿದೆ.

-ಸ್ವಾಮಿಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ

## ಗೋ ಹತ್ಯೆ ನಿಷೇಧ ಕಾಯ್ದೆ ವಾಪಾಸ್‌ಗೆ ಆಗ್ರಹಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಜಾನುವಾರು ವಧೆ ಹಾಗು ಮಾರಾಟ ನಿಷೇಧ ಕಾಯ್ದೆಯನ್ನು ವಾಪಾಸ್ ಪಡೆದು, ಜಾನುವಾರುಗಳ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆಯಲ್ಲಿ ಹೊರಟ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಧರಣಿ ನಡೆಸಿದರು. ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಕೃಷಿ ಕ್ಷೇತ್ರ ಸಂಕಷ್ಟದಲ್ಲಿರುವಾಗ, ಕೃಷಿ ಆದಾಯವನ್ನೇ ನಂಬಿ ಬದುಕು ನಡೆಸಲಾಗದ ರೈತ ಸಮುದಾಯ ಹೈನುಗಾರಿಕೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬದುಕು ಕಟ್ಟಿಕೊಳ್ಳಲು





ಹರಸಾಹಸ ಪಡುತ್ತಿದ್ದಾರೆ. ಹಾಲಿನ ಉತ್ಪಾದನೆಯ ಉದ್ದೇಶಕ್ಕಾಗಿ ಸಾಕುವ ಜರ್ಸಿ ಹಸುಗಳು ವಯಸ್ಸಾದ ಮೇಲೆ ಮತ್ತು ಗಂಡು ಕರುಗಳನ್ನು ಸಾಕುವುದು ರೈತ ಸಮುದಾಯಕ್ಕೆ ದೊಡ್ಡ ಹೊರೆಯಾಗುತ್ತದೆ. ಈ ಕಾರಣ ಅನುಪಯುಕ್ತ ರಾಸುಗಳನ್ನು ಮಾರಾಟ ಮಾಡುವ ಮೂಲಕ ಅಲ್ಪಸ್ವಲ್ಪ ಆದಾಯ ಗಳಿಸುತ್ತಾರೆ. ರಾಜ್ಯದಲ್ಲಿ ಜಾರಿಯಲ್ಲಿರುವ ಜಾನುವಾರು ವಧೆ ಹಾಗು ಮಾರಾಟ ನಿಷೇಧ ಕಾಯ್ದೆ 2020 ಅತ್ಯಂತ ರೈತ ವಿರೋಧಿಯಾಗಿದ್ದು, ರೈತರು ತಮ್ಮ ರಾಸುಗಳನ್ನು ಮುಕ್ತವಾಗಿ ಮಾರಾಟ ಮಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

» ನಾಲ್ಕನೇ ಪುಟದಲ್ಲಿ

## ಆಟೋ ಪಲ್ಟಿ: ತಾಯಿ-ಮಗ ಸಾವು

• ಪ್ರಜೋದಯ ವರದಿ

**ಆಲೂರು :** ಆಟೋ ಮಗುಚಿ ಬಿದ್ದು ತಾಯಿ–ಮಗ ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ಹೊನ್ನೇನಹಳ್ಳಿ ಕ್ರಾಸ್ ಬಳಿ ನಡೆದಿದೆ.

ಕುದುರುವಳ್ಳಿ ಗ್ರಾಮದ ಪ್ರಿಯಾಂಕ (28), ವಿನಿತ್ (7) ಅವರು ಮೃತಪಟ್ಟಿದ್ದಾರೆ. ಆಟೋ ಚಾಲಕ ಅಬ್ಬಾಸ್ (52), ಬಾಲಕ ಸಾಗರ್ (13) ಗಾಯಗೊಂಡಿದ್ದು, ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಪ್ರಿಯಾಂಕ ಅವರು ಮಗ ವಿನಿತ್‌ನನ್ನು ಹಾಸನದ ಶಾಲೆಗೆ ಸೇರಿಸಲು ವರ್ಗಾವಣೆ ಪತ್ರ ತರಲು ಆಟೋದಲ್ಲಿ ತೆರಳುತ್ತಿದ್ದ ವೇಳೆ ಚಾಲಕನ ಹಿಡಿತ ತಪ್ಪಿ ಆಲೂರು- ಮಗ್ಗೆ ರಸ್ತೆಯ ಹೊನ್ನೇನಹಳ್ಳಿ ಬಳಿ ನಿಯಂತ್ರಣಕ್ಕೆ ಸಿಗದೆ ಆಟೋ ಮುಗುಚಿ ಬಿದ್ದ ಪರಿಣಾಮ ತಾಯಿ-ಮಗ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಕಾರ್ಯಕರ್ತರಿಗೆ ನಾಯಕತ್ವ ನೀಡುವ ಏಕೈಕ ಪಕ್ಷ ಬಿಜೆಪಿ

• ಪ್ರಜೋದಯ ವರದಿ

**ಸಕಲೇಶಪುರ :** ಕಾರ್ಯಕರ್ತರನ್ನು ಬೆಳೆಸಿ ಅವರಿಗೆ ನಾಯಕತ್ವ ನೀಡುವ ಏಕೈಕ ಪಕ್ಷವೆಂದರೆ ಅದು ಭಾರತೀಯ ಜನತಾ ಪಕ್ಷವೆಂದು ರಾಜ್ಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಹೇಳಿದರು.

ತಾಲೂಕಿನ ಬಾಳ್ಳುಪೇಟೆ ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ಆಯೋಜಿಸಿದ್ದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಎರಡು ದಿನಗಳ ಕಾಲ ನಡೆದ ಪ್ರಶಿಕ್ಷಣ ವರ್ಗದಲ್ಲಿ ಸಾಮಾನ್ಯ ಕಾರ್ಯಕರ್ತರನ್ನು ಸಂಘಟನೆಯ ಜವಾಬ್ದಾರಿ





ಯುತ ನಾಯಕರನ್ನಾಗಿ ರೂಪಿಸುವ ಉದ್ದೇಶ ಹೊಂದಲಾಗಿದೆ. ಅಧಿಕಾರವಿದ್ದರೂ, ಇಲ್ಲದಿದ್ದರೂ ಪಕ್ಷದ ಕಾರ್ಯಕರ್ತರು ಜನರ ಸಮಸ್ಯೆಗಳಿಗಾಗಿ ನಿರಂತರ ಹೋರಾಟ ನಡೆಸಬೇಕೆಂದು ಸಲಹೆ ನೀಡಿದರು.

ನಾವು ಬೆಳೆದು ಬಂದ ದಾರಿಯನ್ನು ಎಂದಿಗೂ ಮರೆಯಬಾರದು. ಬಿಜೆಪಿ ಪಕ್ಷ ತಾಯಿ ಸಮಾನ. ಭಾರತ ಮಾತೆಯನ್ನು ತಾಯಿ ಎಂದು ಭಾವಿಸುವ ಪಕ್ಷ ಬಿಜೆಪಿಯಷ್ಟೇ. ದೇಶವೇ ಪಕ್ಷಕ್ಕಿಂತ ಮುಖ್ಯ ಎನ್ನುವ ತತ್ವವನ್ನು ಬಿಜೆಪಿ ಅನುಸರಿಸುತ್ತಿದ್ದು, ಕಾಂಗ್ರೆಸ್ ಕುಟುಂಬ ರಾಜಕಾರಣಕ್ಕೆ ಸೀಮಿತವಾಗಿದೆ ಎಂದು ಟೀಕಿಸಿದರು.

ಕಾರ್ಯಕರ್ತರನ್ನು ರಾಜಕೀಯವಾಗಿ ಹಾಗೂ ಸಂಘಟನಾತ್ಮಕವಾಗಿ ಬೆಳೆಸುವ ಉದ್ದೇಶದಿಂದ ಅಭ್ಯಾಸ ವರ್ಗಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಮುಂದಿನ ಒಂದೂವರೆ-ಎರಡು ವರ್ಷಗಳ ಅವಧಿಯಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದ್ದು, ಕಾರ್ಯಕರ್ತರು ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ಮಂಡ್ಯ ಭಾಗದಲ್ಲಿಯೂ ಬಿಜೆಪಿ ಪರ ಉತ್ತಮ ವಾತಾವರಣ ನಿರ್ಮಾಣವಾಗಿದ್ದು, ಹೋರಾಟ ಮಾಡಿದಷ್ಟು ಹೆಚ್ಚು ಜನರ ಬೆಂಬಲ ಮತ್ತು ಅಧಿಕಾರ ದೊರೆಯುತ್ತದೆ.ಕಾರ್ಯಕರ್ತರ ನಡುವೆ ಮನಸ್ತಾಪ ಸಾಮಾನ್ಯ. ಆದರೆ, ಚುನಾವಣೆ

» ನಾಲ್ಕನೇ ಪುಟದಲ್ಲಿ

## ಕರ್ನಾಟಕ ವಿಧಾನ ಪರಿಷತ್ 7 ಸ್ಥಾನಗಳಿಗೆ ಜೂ.18 ರಂದು ಚುನಾವಣೆ

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗ ಕರ್ನಾಟಕ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆ ಘೋಷಿಸಿದ್ದು, ಜೂನ್ 18 ರಂದು ಮತದಾನ ನಡೆಯಲಿದೆ ಎಂದು ಮಂಗಳವಾರ ತಿಳಿಸಿದೆ. ಶಾಸಕರಿಂದ ಆಯ್ಕೆಯಾದ ಏಳು ಎಂಎಲ್‌ಸಿಗಳ ಅವಧಿ ಜೂನ್ 30 ರಂದು ಮುಕ್ತಾಯಗೊಳ್ಳಲಿದೆ.

**ಬೇಕಾಗಿದ್ದಾರೆ**

ಹಾಸನದ ಫ್ಯಾಕ್ಟರಿಗಳಲ್ಲಿ ಕಾರ್ಯನಿರ್ವಹಿಸಲು ಕೆಳಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ.

1) ಫೀಲ್ಡ್ ಆಫೀಸರ್


★ ಕನಿಷ್ಠ 3 ವರ್ಷಗಳ ಅನುಭವ, ★ಮ್ಯಾನ್ ಪವರ್ ನಿರ್ವಹಿಸುವ ಸಾಮರ್ಥ್ಯ ★ ಆಕರ್ಷಕ ವೇತನ ನೀಡಲಾಗುವುದು.

ಆಸಕ್ತರು ಸಂಪರ್ಕಿಸಿ

88848 00010

CMYK CMYK CMYK CMYK

# ಜೀವನ ಪಾಠ ಕಲಿಸುವ ಶಾಕ್ ಕೊಡುವ ಸ್ಟೋರಿಗಳು!



ಪದಸಾಗರ

ಟೆಕ್ಸಾಸ್‌ನ ನಾಲ್ಕು ಕಾಲಿನ ಹುಡುಗಿ ಎಂಬ ಜಾಹೀರಾತಿನ ಅಡಿಯಲ್ಲಿ ಮರ್ಟಲ್‌ಳನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಯಿತು. ನಗುನಗುತ್ತಾ ಜನರೆದುರು ಕೂತು ತನ್ನ ನಾಲ್ಕು ಕಾಲುಗಳ ದೇಹವನ್ನು ಪ್ರದರ್ಶಿಸುತ್ತಿದ್ದ ಮರ್ಟಲ್ ಕೆಲವೇ ದಿನಗಳಲ್ಲಿ ಸೆನ್ಸೇಶನ್ ಆದಳು. ನಾಲ್ಕು ಕಾಲುಗಳ ಹುಡುಗಿ ಎಂಬುದು ಆಕೆಯನ್ನು ನೋಡಲು ಬರುವತನಕ ವಿಶೇಷವಾಗಿರುತ್ತಿತ್ತು.

ಇತ್ತೀಚೆಗೆ ಹೀಗೇ ಫೇಸ್‌ಬುಕ್ ಸ್ಕ್ರೋಲ್ ಮಾಡ್ತಾ ಇದ್ದಾಗ, ಇದೇನಿದು ಪ್ರಕೃತಿಯ ವೈಚಿತ್ರ್ಯ... ಈ ಹುಡುಗಿಗೆ ನಾಲ್ಕು ಕಾಲುಗಳು.. ಪೂರ್ತಿ ಕಥೆ ಓದಿದ್ರೆ ಶಾಕ್! ಹೀಗೇನೋ ಕ್ಯಾಪ್ಶನ್ ಕಂಡಿತು. ಜಗತ್ತಿನ ಎಷ್ಟೆಲ್ಲ ಗಿಮಿಕ್‌ಗಳನ್ನು ಕಂಡ ನಂತರವೂ, ಸೋಷಿಯಲ್ ಮೀಡಿಯಾದ ಅಗ್ಗದ ಥಂಬ್ ನೇಲ್‌ಗಳ ಅಸಲೀಯತ್ತು ಗೊತ್ತಾದ ಮೇಲೂ ಮನಸು ಇಂಥ ಕಥೆಗಳಿಗೆ ತಂತಾನೇ ಬಲಿಯಾಗಿಬಿಡುತ್ತದಲ್ಲ. ನಾನು ಯಾವುದೇ ಶಾಕ್‌ನ ನಿರೀಕ್ಷೆ ಇಲ್ಲದೆಯೂ ಅದನ್ನು ಓಪನ್ ಮಾಡಿದೆ.

ಮನಸು ಮಾತ್ರ ಬಾಲ್ಯದಲ್ಲಿ ಕಂಡಿದ್ದ ಊರಿನ ಜಾತ್ರೆಗಳತ್ತ ನಾಲ್ಕು ಕಾಲುಗಳಲ್ಲಿ ಅಂಬೆಗಾಲಿಟ್ಟು ಹಿಮ್ಮುಖ ಚಲಿಸತೊಡಗಿತ್ತು. ಜಾತ್ರೆಗಳಲ್ಲಿ ಹತ್ತು ಹಲವು ಆಟಗಳ ನಡುವೆ ಒಂದಷ್ಟು ಸ್ಟಾಲ್‌ಗಳಿರುತ್ತಿದ್ದವು. ಎರಡು ತಲೆಯ ಬಾಲಕಿ, ಕೈಕಾಲೇ ಇಲ್ಲದ ವ್ಯಕ್ತಿ ತಾನೇ ಕಾಫಿ ಮಾಡುತ್ತಾನೆ, ಮಾತನಾಡುವ ಕೋತಿ, ಹಣೆಯ ಮೇಲೆ ಮೂರನೇ ಕಣ್ಣಿರುವ ಮಗು, ಹೀಗೆ ವಿಚಿತ್ರ ದೇಹ ಹೊಂದಿರುವ ಮನುಷ್ಯರು, ಪ್ರಾಣಿಗಳು ಜಾತ್ರೆಗಳಲ್ಲಿ ಪ್ರದರ್ಶನದ ಸರಕಾಗಿರುತ್ತಿದ್ದವು. ಅವರನ್ನು ನೋಡಲು ನೂಕುನುಗ್ಗಲು.

ಸೃಷ್ಟಿಯ ವೈಚಿತ್ರ್ಯದಿಂದ ಅಥವಾ ಯಾವುದೋ ವೈಜ್ಞಾನಿಕ ಎಡವಟ್ಟಿನಿಂದ ಆಗುವ ದೇಹದ ವೈಕಲ್ಯ ಪ್ರದರ್ಶನಕ್ಕೆ ಮಾರಾಟಕ್ಕೆ ವಸ್ತುವಾಗಿಬಿಡುತ್ತದಲ್ಲ ಅಂತ ಇಂದು ಅನಿಸುತ್ತಿದೆ. ಆದರೆ ನಮ್ಮ ಬಾಲ್ಯಕಾಲದ ಆ ಅಚ್ಚರಿ ನೋಡುವ ಸರತಿಯಲ್ಲಿ ನಾವೂ ಟಿಕೆಟ್ ಹೊಂದಿದವರೇ. ಆ ರೀತಿ ವಿಚಿತ್ರವಾಗಿ ಹುಟ್ಟಿದರೆ ಇದ್ದದ್ದು ಅದೊಂದೇ ಆಯ್ಕೆ. ಭಿಕ್ಷೆ ಬೇಡುವುದು ಅಥವಾ ಪ್ರದರ್ಶನಗಳಲ್ಲಿ ತಮ್ಮನ್ನು ತಾವು ವ್ಯಾಪಾರಕ್ಕಿಟ್ಟುಕೊಳ್ಳುವುದು.

ಬಹುತೇಕ ಕೇಸ್‌ಗಳಲ್ಲಿ ಯಾವನೋ ಇಂಥ ಸೃಷ್ಟಿಗಳನ್ನು ಇಟ್ಟುಕೊಂಡು ತನ್ನ ಜೇಬಿಗೆ ಹಣ ಇಳಿಸಿಕೊಳ್ಳುತ್ತಿರುತ್ತಾನೆ. ಚಿನ್ನದ ಮೊಟ್ಟೆ ಇಡುವ ಕೋಳಿಯಂತೆ ಬಳಸಿಕೊಳ್ಳುತ್ತಿರುತ್ತಾನೆ. ಇಂಥ ವೈಕಲ್ಯಗಳೊಂದಿಗೆ ಹುಟ್ಟಿದ ಆ ಜೀವ ಯಾರನ್ನೋ ಉದ್ಧರಿಸಿ ಅಕಾಲ ಮೃತ್ಯುವಿಗೆ ಒಳಗಾಗಿ ಇಹಲೋಕದ ನಂಟು ಕಳೆದುಕೊಂಡು ಮುಕ್ತಿ ಹೊಂದುತ್ತದೆ.

ಬಾಲ್ಯದಿಂದ ಈತನಕ ಕಂಡ ಇಂಥ ವಿಚಿತ್ರ ಸೃಷ್ಟಿಗಳೆಲ್ಲವನ್ನು ನೆನಪಿಸಿಕೊಳುತ್ತಾ, ಇವರ ಬದುಕೆಲ್ಲ ಇಷ್ಟೇನಾ ಅಂತ ಯೋಚಿಸುತ್ತಾ, ಫೇಸ್ ಬುಕ್‌ನ ಈ ಪೋಸ್ಟ್ ಓಪನ್ ಮಾಡಿದಾಗ ಕಂಡದ್ದು ಒಂದು ಸ್ಪೂರ್ತಿದಾಯಕ ಕಥೆ.

1868, ಮೇ 12. ಅಮೆರಿಕದ ಟೆನ್ನೆಸ್ಸೀ ರಾಜ್ಯದ ಲಿಂಕನ್ ಕೌಂಟಿಯಲ್ಲಿ ವಿಲಿಯಂ ಮತ್ತು ನ್ಯಾನ್ಸಿ ಎಂಬ ದಂಪತಿಗೆ ಒಂದು ಹೆಣ್ಣು ಮಗು ಜನಿಸಿತು. ಸಹಜ ಹೆರಿಗೆಯಲ್ಲಿ ಹೊರ ಬಂದ ಹೆಣ್ಮಗುವನ್ನು ಕಂಡು ವೈದ್ಯರಿಗೆ ನರ್ಸ್‌ಗಳಿಗೆ ಆಘಾತ. ಆ ಮಗು ನಾಲ್ಕು ಕಾಲುಗಳೊಂದಿಗೆ ಹುಟ್ಟಿತ್ತು. ಆ ಮಗುವಿನ ಹೆಸರು ಜೋಸೆಫಿನ್ ಮರ್ಟಲ್ ಕಾರ್ಬಿನ್.




ವೈದ್ಯಕೀಯ ಪರಿಭಾಷೆಯಲ್ಲಿ ಇದನ್ನು ಡೈಪೈಗಸ್ ಅಂತಾರಂತೆ. ಭ್ರೂಣದ ಬೆಳವಣಿಗೆ ಹಂತದಲ್ಲಿ, ಸೊಂಟದ ಕೆಳಗಿನ ಭಾಗ ಎರಡಾಗಿ ಹೋಗಿ, ಬೆಳೆಯುವ ಅತ್ಯಂತ ಪರೂಪದ ಕೇಸ್ ಇದು. ಮರ್ಟಲ್‌ಗೆ ಸೊಂಟದ ಮೇಲ್ಭಾಗ ಸಂಪೂರ್ಣ ಸಹಜವಾಗಿತ್ತು. ಸೊಂಟದ ಕೆಳಗೆ ಎರಡು ಸೊಂಟ, ಅದರಿಂದ ನಾಲ್ಕು ಕಾಲುಗಳು! ಹೊರಗಿನ ಎರಡು ಕಾಲುಗಳು ಸಂಪೂರ್ಣ ಬೆಳೆದಿದ್ದವು. ಆದರೆ ಒಳಗಿನ ಎರಡು ಕಾಲುಗಳು ಚಿಕ್ಕದಾಗಿದ್ದವು.

ಪ್ರತಿ ಕಾಲಿಗೆ ಮೂರೇ ಬೆರಳುಗಳಿದ್ದವು. ಒಳಗಿನ ಕಾಲುಗಳನ್ನು ಸ್ವಲ್ಪ ಮಟ್ಟಿಗೆ ಅಲುಗಾಡಿಸಬಹುದಿತ್ತು. ಆದರೆ ಅವು ಪೋಲಿಯೋ ಪೀಡಿತವೋ ಎಂಬಂತಿದ್ದವು. ಮಗುವನ್ನು ನೋಡಿದ ವೈದ್ಯರು, ಈ ಮಗು ಬದುಕುವುದು ಕಷ್ಟ. ಇದರ ಬಗ್ಗೆ ಹೋಪ್ ಇಟ್ಕೋಬೇಡಿ ಅಂದುಬಿಟ್ಟರು. ಆದರೆ ಡಾಕ್ಟರ್‌ಗೆ ಅಚ್ಚರಿಯಾಗುವ ಹಾಗೆ ಮಗು, ಮೂರು ವಾರಗಳ ವೇಳೆಗೆ ಹತ್ತು ಪೌಂಡ್ ತೂಕ ತಲುಪಿಬಿಟ್ಟಿತು.

ಕಾಲಿನ ವೈಚಿತ್ರ್ಯವೊಂದನ್ನು ಬಿಟ್ಟರೆ ಅದೊಂದು ಆರೋಗ್ಯಕರ ಮಗು. ಕೆಲವು ವಿಚಾರಗಳಲ್ಲಿ ಪಾಶ್ಚಾತ್ಯ ಜಗತ್ತು ಕೂಡ ನಮ್ಮ ದೇಶಕ್ಕಿಂತ ಭಿನ್ನವಾಗಿರಲಿಲ್ಲ. ಇನ್ ಫ್ಯಾಕ್ಟ್ ನಮಗಿಂತ ಹೆಚ್ಚು ಮೂಢನಂಬಿಕೆಗಳನ್ನು ಹೊತ್ತು ಆಡಿಸುತ್ತಿತ್ತು. ಆ ಮಗುವನ್ನು ಕೆಲವರು ದೇವರ ಶಾಪದ ಫಲ ಅಂತಲೂ, ಕೆಲವರು ಅಪಶಕುನ ಅಂತಲೂ, ಸಮಾಜಕ್ಕೆ ಮಾರಕ ಅಂತಲೂ ದೂರವಿಡಿಸುವ ಪ್ರಯತ್ನ ಮಾಡಿದರು. ಸಾಯಿಸಿಬಿಡಿ ಎಂಬ ಸಲಹೆಗಳೂ ಬಂದವು.

ಆದರೆ ವಿಲಿಯಂ ಮತ್ತು ನ್ಯಾನ್ಸಿ ಯಾರ ಮಾತಿಗೂ ಕಿವಿಗೊಡುವುದಿಲ್ಲ. ವಿಲಿಯಂ-ನ್ಯಾನ್ಸಿಗೆ ಈ ಮಗು ಹುಟ್ಟುವ ಮುನ್ನ ಒಂದು ಮಗುವಿತ್ತು. ನ್ಯಾನ್ಸಿಯ ಮೊದಲ ಪತಿಯಿಂದ ಬಂದಿದ್ದ ಇನ್ನೊಂದು ಮಗುವೂ ಇತ್ತು. ಆದರೂ ಈ ಮಗುವನ್ನು ನಿರ್ಲಕ್ಷಿಸಲಿಲ್ಲ. ಅವರಿಬ್ಬರಿಗೆ ಕೊಟ್ಟ ಪ್ರೀತಿಗಿಂತ ಹೆಚ್ಚೇ ಪ್ರೀತಿ ಕೊಟ್ಟರು. ಜೋಸೆಫಿನ್ ಮರ್ಟಲ್ ಎಂಬ ಹೆಸರಿಟ್ಟು ತುಂಬ ಅಕ್ಕರೆಯಿಂದ ಸಾಕತೊಡಗಿದನು ವಿಲಿಯಂ.

ತಂದೆ ವಿಲಿಯಂ ಒಬ್ಬ ಸೈನಿಕ. ಅಮೆರಿಕದ ಅಂತರ್ಯುದ್ಧದಲ್ಲಿ ಗಾಯಗೊಂಡಿದ್ದ ಯೋಧ. ಅವನ ಕುಟುಂಬ ಆರ್ಥಿಕವಾಗಿ ಬಹಳ ಸಂಕಷ್ಟದಲ್ಲಿತ್ತು. ಆದರೂ ಮಗಳನ್ನು ಬೀದಿಗೆ ಬಿಡಲಿಲ್ಲ. ಆಕೆಯ ದೇಹದ ವಿಚಿತ್ರ ರಚನೆಯ ಕಾರಣಕ್ಕೆ, ಪದೇಪದೆ ಆರೋಗ್ಯ ಕೈಕೊಡುತ್ತಿತ್ತು. ಆದರೆ ದೇವರು ಆಕೆಯೊಳಗೊಂದು ಭಯಂಕರ ಆತ್ಮವಿಶ್ವಾಸ ಮತ್ತು ಚೈತನ್ಯ ತುಂಬಿ ಕಳಿಸಿದ್ದ. ತಂದೆಗೇ ಧೈರ್ಯ ತುಂಬುವ ಮಾತುಗಳನ್ನಾಡಿ ನಾನು ನಿನಗೆ ಹೊರೆಯಾಗುವುದಿಲ್ಲ ಡೋಂಟ್ ವರಿ ಅನ್ನುತ್ತಿದ್ದಳು.

ಮರ್ಟಲ್‌ಗೆ ಹದಿಮೂರು ವರ್ಷವಿದ್ದಾಗ, ವಿಲಿಯಂ ಬಹಳ ಅನಿವಾರ್ಯವೆನಿಸಿ, ಮಗಳನ್ನು ಪ್ರದರ್ಶನಕ್ಕಿಡುವ ನಿರ್ಧಾರಕ್ಕೆ ಬಂದು ಬಿಡುತ್ತಾನೆ. ಜೋಸೆಫಿನ್ ಮರ್ಟಲ್ ಅದನ್ನು ವಿರೋಧಿಸುವುದಿಲ್ಲ. ಒಪ್ಪವಾಗಿ ತಯಾರಾಗಿ ಬಿಡುತ್ತಾಳೆ. ಅಂದಿನ ಅಮೆರಿಕದಲ್ಲಿ ಫ್ರೀಕ್ ಶೋ ಎಂಬುದು ಬಹಳ ಪ್ರಖ್ಯಾತ ಎಕ್ಸಿಬಿಷನ್.

ದೈಹಿಕ ವೈಚಿತ್ರ್ಯಗಳಿರುವ ವ್ಯಕ್ತಿಗಳನ್ನು ಪ್ರದರ್ಶಿಸಲೆಂದೇ ಆ ಎಕ್ಸಿಬಿಷನ್ ನಡೆಯುತ್ತಿತ್ತು. ಟೆಕ್ಸಾಸ್‌ನ ನಾಲ್ಕು ಕಾಲಿನ ಹುಡುಗಿ ಎಂಬ ಜಾಹೀರಾತಿನ ಅಡಿಯಲ್ಲಿ ಮರ್ಟಲ್‌ಳನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಯಿತು. ನಗುನಗುತ್ತಾ ಜನರೆದುರು ಕೂತು ತನ್ನ ನಾಲ್ಕು ಕಾಲುಗಳ ದೇಹವನ್ನು ಪ್ರದರ್ಶಿಸುತ್ತಿದ್ದ ಮರ್ಟಲ್ ಕೆಲವೇ ದಿನಗಳಲ್ಲಿ ಸೆನ್ಸೇಶನ್ ಆದಳು. ನಾಲ್ಕು ಕಾಲುಗಳ ಹುಡುಗಿ ಎಂಬುದು ಆಕೆಯನ್ನು ನೋಡಲು ಬರುವತನಕ ವಿಶೇಷವಾಗಿರುತ್ತಿತ್ತು. ಆದರೆ ಜನರು ಆಕೆಯನ್ನು ನೋಡಿದ ಕ್ಷಣದಿಂದ ಆಕೆಯ ವ್ಯಕ್ತಿತ್ವದ ಬಗ್ಗೆ ಮಾತನಾಡಲಾರಂಭಿಸಿದರು.

ಅವಳ ಖ್ಯಾತಿ ದಿನೇದಿನೆ ಹೆಚ್ಚಲಾರಂಭಿಸಿತು. ಪಿ.ಟಿ.ಬಾರ್ನಮ್ ಎಂಬ ಅಮೆರಿಕದ ಪ್ರಖ್ಯಾತ ಸರ್ಕಸ್ ಉದ್ಯಮಿ ಈಕೆಯನ್ನು ತನ್ನ ಸರ್ಕಸ್ ಪ್ರದರ್ಶನಗಳಲ್ಲಿ ತೋರಿಸಿ ಹಣ ಮಾಡತೊಡಗಿದ. ನ್ಯೂಯಾರ್ಕ್‌ನ ಹ್ಯೂಬರ್ ಮ್ಯೂಸಿಯಂ, ರಿಂಗ್ಲಿಂಗ್ ಬ್ರದರ್ಸ್ ಸರ್ಕಸ್, ಕೋನಿ ಐಲ್ಯಾಂಡ್ ಸೇರಿದಂತೆ ಹಲವೆಡೆ ಮರ್ಟಲ್ ವಿಶೇಷ ಆಕರ್ಷಣೆಯಾಗಿ ಕಾಣಿಸಿಕೊಳ್ಳತೊಡಗಿದಳು.

ಇಂದಿನ ಮೌಲ್ಯದಲ್ಲಿ ವಾರಕ್ಕೆ ಸುಮಾರು 14000 ಡಾಲರ್ ದುಡಿಯತೊಡಗಿದಳು ಮರ್ಟಲ್. ಆಕೆಯನ್ನು ವಿಚಿತ್ರ ದೇಹವೆಂದು ನೋಡುವ ಬದಲು ಅಪರೂಪದ ಕಲಾವಿದೆ ಎಂಬಂತೆ ಅಮೆರಿಕ ನೋಡತೊಡಗಿತು. ಮರ್ಟಲ್ ಯಾವ ಪರಿ ಜನಪ್ರಿಯಳಾದಳು ಅಂದ್ರೆ, ಒಂದಷ್ಟು ಸರ್ಕಸ್ ಉದ್ಯಮಿಗಳು ಮರ್ಟಲ್‌ನ ನಕಲುಗಳನ್ನು ಸೃಷ್ಟಿಸತೊಡಗಿದರು.

ಎರಡು ಕಾಲಿನ ಹುಡುಗಿಯರಿಗೆ ಕೃತಕವಾಗಿ ಇನ್ನೆರಡು ಕಾಲು ಅಂಟಿಸಿ, ಜನರನ್ನು ಯಾಮಾರಿಸಿ ಸೆಳೆಯಲು ಪ್ರಯತ್ನಿಸಿದರು. ಆರುಕಾಲಿನ ಹುಡುಗಿ, ನಾಲ್ಕು ಕೈ ನಾಲ್ಕು ಕಾಲುಗಳ ಹುಡುಗಿ ಅಂತೆಲ್ಲ ಕೃತಕವಾಗಿ ರೆಡಿ ಮಾಡಿ ಮರ್ಟಲ್ ಜತೆಗೆ ಸ್ಪರ್ಧೆಗೂ ಬಿದ್ದರು. ಆದರೆ ಜನರು ಮರ್ಟಲ್‌ಳ ಸಹಜ ವೈಚಿತ್ರ್ಯ ಮತ್ತು ವ್ಯಕ್ತಿತ್ವದ ಮುಂದೆ ಮಿಕ್ಕೆಲ್ಲ ನಕಲುಗಳನ್ನು ಸಾರಾಸಗಟಾಗಿ ತಿರಸ್ಕರಿಸಿಬಿಟ್ಟರು.

ತಂದೆಯ ಕಷ್ಟಕ್ಕೆ ನೆರವಾಗಲು, ಕುಟುಂಬಕ್ಕೆ ಭಾರವಾಗದಿರಲು ತನ್ನನ್ನು ತಾನು ಪ್ರದರ್ಶನಕ್ಕಿಟ್ಟುಕೊಂಡಿದ್ದ ಮರ್ಟಲ್ ಅಂತರ್ಯದಲ್ಲಿ ಇದನ್ನು ಎಂಜಾಯ್ ಮಾಡುತ್ತಿರಲಿಲ್ಲ. ಭಾವುಕ ಹುಡುಗಿಯಾಗಿದ್ದ ಆಕೆಗೆ ವಯೋಸಹಜವಾಗಿ ಪ್ರೀತಿ ಪ್ರೇಮ ಸಾಂಗತ್ಯ ಇವೆಲ್ಲವೂ ಬೇಕನಿಸುತ್ತಿತ್ತು.

ಸ್ವತಂತ್ರವಾಗಿ ಬದುಕುವ ಕನಸುಗಳು ಹುಟ್ಟಿಕೊಂಡಿದ್ದವು. 1886, ಜೂನ್ 12ರಂದು ಮರ್ಟಲ್ ತನ್ನ 18ನೇ ವಯಸ್ಸಿನಲ್ಲಿ ಜೇಮ್ಸ್ ಕ್ಲಿಂಟನ್ ಬಿಕ್ನೆಲ್ ಎಂಬ ಯುವಕನನ್ನು ಪ್ರೀತಿಸಿ ವಿವಾಹವಾದಳು. ಕ್ಲಿಂಟನ್ ವೃತ್ತಿಯಿಂದ ವೈದ್ಯ. ಮರ್ಟಲ್‌ಳ ದೇಹ ಆತನಲ್ಲಿ ಯಾವುದೇ ಅಸಹ್ಯ ಹುಟ್ಟಿಸಲಿಲ್ಲ.

ಆಕೆಯ ಮನಸಿಗೆ, ವ್ಯಕ್ತಿತ್ವಕ್ಕೆ ಸೋತಿದ್ದ ಕ್ಲಿಂಟನ್‌ಗೆ, ನಾಲ್ಕು ಕಾಲುಗಳ ದೇಹವೊಂದು ವಿಶೇಷ ಸಂಗತಿಯೇ ಅನಿಸಲಿಲ್ಲ. ಮರ್ಟಲ್‌ಳನ್ನು ಈ ಪಬ್ಲಿಕ್ ಎಕ್ಸಿಬಿಷನ್, ಸರ್ಕಸ್ ಎಲ್ಲದರಿಂದ ಹೊರತರುತ್ತಾನೆ ಪತಿ ಜೇಮ್ಸ್ ಕ್ಲಿಂಟನ್. ಟೆಕ್ಸಾಸ್‌ನ ಜಾನ್ಸನ್ ಕೌಂಟಿಗೆ ತೆರಳಿ ಇಬ್ಬರೂ ಕೃಷಿ ಜಗತ್ತಿಗೆ ತೆರೆದುಕೊಳ್ಳುತ್ತಾರೆ.

ಮನೆ ಕಟ್ಟುತ್ತಾರೆ. ದಂಪತಿಗೆ ಐದು ಮಕ್ಕಳಾಗುತ್ತಾರೆ. ಯಾವ ಮಗುವೂ ತನ್ನಂತಾಗುವುದು ಬೇಡ ಎಂಬುದೊಂದೇ ಆಕೆಯ ಪ್ರಾರ್ಥನೆಯಾಗಿತ್ತು. ದೇವರು ತಥಾಸ್ತು ಅಂತಲೂ ಅಂದಿದ್ದನು. ದೈಹಿಕವಾಗಿ ಎಲ್ಲವೂ ಸರಿ ಇರುವವರಿಗಿಂತಲೂ ಅದ್ಭುತ ಕೌಟುಂಬಿಕ ಜೀವನ ನಡೆಸಿ ತೋರಿಸುತ್ತಾಳೆ ಮರ್ಟಲ್.

ಮರ್ಟಲ್ ಎಕ್ಸಿಬಿಷನ್ ಮತ್ತು ಸರ್ಕಸ್

> ಬಹುತೇಕ ಕೇಸ್‌ಗಳಲ್ಲಿ ಯಾವನೋ ಇಂಥ ಸೃಷ್ಟಿಗಳನ್ನು ಇಟ್ಟುಕೊಂಡು ತನ್ನ ಜೇಬಿಗೆ ಹಣ ಇಳಿಸಿಕೊಳ್ಳುತ್ತಿರುತ್ತಾನೆ. ಚಿನ್ನದ ಮೊಟ್ಟೆ ಇಡುವ ಕೋಳಿಯಂತೆ ಬಳಸಿಕೊಳ್ಳುತ್ತಿರುತ್ತಾನೆ. ಇಂಥ ವೈಕಲ್ಯಗಳೊಂದಿಗೆ ಹುಟ್ಟಿದ ಆ ಜೀವ ಯಾರನ್ನೋ ಉದ್ಧರಿಸಿ ಅಕಾಲ ಮೃತ್ಯುವಿಗೆ ಒಳಗಾಗಿ ಇಹಲೋಕದ ನಂಟು ಕಳೆದುಕೊಂಡು ಮುಕ್ತಿ ಹೊಂದುತ್ತದೆ.

ಪ್ರದರ್ಶನಗಳಿಂದ ದೂರ ಉಳಿದು ದಶಕಗಳೇ ಉರುಳಿದರೂ, ಆಕೆಯನ್ನು ಅಮೆರಿಕದ ಜನತೆ ಮರೆಯುವುದೇ ಇಲ್ಲ. ಯಾವುದೇ ಪ್ರದರ್ಶನ ನಡೆದರೂ ಮರ್ಟಲ್‌ಳನ್ನು ನೆನಪಿಸಿಕೊಳ್ಳುವುದು, ಆಕೆಯೊಂದಿಗೆ ಇತರರನ್ನು ಹೋಲಿಸುವುದು, ಮಾಧ್ಯಮಗಳಲ್ಲಿ ಆಕೆಯನ್ನು ನೆನಪಿಸಿಕೊಳ್ಳುವುದು ನಡೆದೇ ಇತ್ತು.

1909ರಲ್ಲಿ, ಅಂದರೆ ಮದುವೆಯಾಗಿ ಎರಡು ದಶಕಗಳ ನಂತರ, ಮರ್ಟಲ್ ಆರ್ಥಿಕ ಮುಗ್ಗಟ್ಟಿಗೆ ಒಳಗಾದಾಗ, ಮತ್ತೆ ತನ್ನನ್ನು ತಾನು ಪ್ರದರ್ಶನಕ್ಕಿಟ್ಟುಕೊಳ್ಳಲು ನಿರ್ಧರಿಸಿದಳು. ನ್ಯೂಯಾರ್ಕ್‌ನ ಹ್ಯೂಬರ್ ಮ್ಯೂಸಿಯಂನಲ್ಲಿ ಆಕೆ ಕಾಣಿಸಿಕೊಂಡ ಕ್ಷಣ ಅಮೆರಿಕದಲ್ಲಿ ಭಾರಿ ಸಂಚಲನವಾಯಿತು. ಅದೇ ರೀತಿ ರಿಂಗ್ಲಿಂಗ್ ಬ್ರದರ್ಸ್ ಸರ್ಕಸ್ ಮತ್ತು ಕೋನಿ ಐಲ್ಯಾಂಡ್‌ನಲ್ಲಿ ಅವಳ ಪ್ರದರ್ಶನಗಳಿಗೆ ಜನ ಮುಗಿಬಿದ್ದರು. ಈ ಬಾರಿ ಆಕೆ ಹಳೆಯ ಮರ್ಟಲ್



ಆಗಿರಲಿಲ್ಲ.

ನಾಲ್ಕು ಕಾಲಿನ ಹುಡುಗಿ, ಮದುವೆ ಆಗಿರುವುದು, ಐದು ಮಕ್ಕಳ ತಾಯಿಯಾಗಿರುವುದು, ಸ್ವಾವಲಂಬಿಯಾಗಿ ಮನೆ ಕಟ್ಟಿ, ಕೃಷಿ ಜೀವನ ನಡೆಸಿರುವುದು ಎಲ್ಲವೂ ಆಕೆಯನ್ನು ಇನ್ನಷ್ಟು ವಿಶೇಷವಾಗಿಸಿದ್ದವು. ಮತ್ತೆ ಹಣ ಹರಿದುಬರತೊಡಗಿತು. ಮರ್ಟಲ್ ಒಂದು ದಿನವೂ ಯಾರಿಗೂ ಹೊರೆಯಾಗದಂತೆ, ಕೇವಲ ಅನುಕಂಪಕ್ಕೆ ಒಳಗಾಗದಂತೆ ಬದುಕಿ, ಸಾರ್ಥಕ್ಯ ಕಂಡಿದ್ದಳು.

59 ವರ್ಷದ ಹೊಸ್ತಿಲಲ್ಲಿ, ಆಕೆಯ ಕಾಲೊಂದು ಚರ್ಮದ ಸೋಂಕಿಗೆ ಒಳಗಾಯಿತು. ಅಂದಿನ ವೈದ್ಯಲೋಕದಲ್ಲಿ ಅದಕ್ಕೆ ಔಷಧಿಯೇ ಸಿಗಲಿಲ್ಲ. ಸೋಂಕು ಹೆಚ್ಚಾಗಿ, ಇಡೀ ದೇಹದಲ್ಲಿ ಹರಡಿ ಆಕೆ ಕೊನೆಯುಸಿರು ಎಳೆದಳು.

ಜಗತ್ತು ಹೇಗಿದೆ ನೋಡಿ. ಆಕೆ ಸಾಯುತ್ತಿದ್ದ ಹಾಗೇ ವೈದ್ಯರು, ಸಂಶೋಧಕರು ಆಕೆಯ ದೇಹಕ್ಕಾಗಿ ರಣಹದ್ದುಗಳಂತೆ ಎರಗಿದರು. ದೊಡ್ಡ ಮೊತ್ತ ಕೊಡಲು ಸಿದ್ಧ, ಈ ದೇಹ ತಮಗೆ ಬೇಕು ಎಂದು ಡಿಮ್ಯಾಂಡಿಗೆ ನಿಂತರು. ಇವರು ಶವವನ್ನೂ ಬಿಡುವುದಿಲ್ಲ ಎಂದು ಖಾತರಿಯಾಯ್ತು ಕುಟುಂಬಕ್ಕೆ. ಮರ್ಟಲ್‌ಳನ್ನು ಹೂಳಿ ಸಮಾಧಿಯ ಮೇಲೆ ಗಾರೆ ಮಾಡಲಾಯ್ತು. ಅದು ಗಟ್ಟಿಯಾಗುವ ತನಕ ಕುಟುಂಬ ಕಾವಲು ನಿಂತಿತು. ಟೆಕ್ಸಾಸ್‌ನ ಕ್ಲೆಬರ್ನ್ ಮೆಮೋರಿಯಲ್ ಸ್ಮಶಾನದಲ್ಲಿ ಅವಳ ಕಾಂಕ್ರೀಟ್ ಸಮಾಧಿ ಇಂದೂ ಇದೆಯಂತೆ.

ಎಲ್ಲ ಸರಿಯಾಗಿರುವ ನಾವು ಬದುಕಲು ನೂರು ದೂರು ಹೇಳುತ್ತೇವೆ. ಆದರೆ ಇಂಥ ವೈಕಲ್ಯದ ನಡುವೆ ಆಕೆ ಜವಾಬ್ದಾರಿಯುತ ಮಗಳಾಗಿ, ಪ್ರೀತಿಸೋ ತಾಯಿಯಾಗಿ, ಒಳ್ಳೆಯ ಪತ್ನಿಯಾಗಿ, ಒಬ್ಬ ಧೈರ್ಯಶಾಲಿ ಮಹಿಳೆಯಾಗಿ ಬರೋಬ್ಬರಿ ಅರವತ್ತು ವರ್ಷ ಜೀವಿಸಿ ಹೋದಳಲ್ಲ. ವಾಹ್ ಅನ್ನದೇ ಇರಲಾದೀತೇ?

**- ನವೀನ್** ಸಾಗರ್



» ವಿಶ್ವವಿದ್ಯಾಲಯಗಳ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ತಕ್ಕಮಟ್ಟಿಗೆ ಶಿಸ್ತು ಮತ್ತು ಪರೀಕ್ಷಾ ನಿಯಮಗಳನ್ನು ಪಾಲಿಸಲಾಗುತ್ತಿತ್ತು. ಇತರೆ ಊರುಗಳ ಎಷ್ಟೋ ಪರೀಕ್ಷಾ ಕೇಂದ್ರಗಳು ಎಲ್ಲಾ ನಿಯಮ, ಮೌಲ್ಯಗಳನ್ನು ಗಾಳಿಗೆ ತೂರಿ ಪದವಿಗಳನ್ನು ಅಗ್ಗಕ್ಕೆ ಮಾರುವ ಗೂಡಂಗಡಿಗಳಾಗಿದ್ದವು. ಇಲ್ಲಿ ಮೂರು ಹಂತದ ಸುಲಿಗೆ ನಡೆಯುತ್ತಿತ್ತು.

# ದೂರ ಶಿಕ್ಷಣ ನಕಲಿಗೆ ಮುಕ್ತವಾಗದಿರಲಿ!

ಮುಕ್ತ ಶಿಕ್ಷಣ

ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ನೀಡಿರುವ ದೂರ ಶಿಕ್ಷಣದ ಮೂಲಕ ಪದವಿ ಪಡೆಯುವ ಏಕಮೇವ ಸೌಲಭ್ಯ ಹಾಗೂ ಮಾನ್ಯತೆಯನ್ನು ಇತರೆ ಎಲ್ಲಾ ವಿಶ್ವವಿದ್ಯಾಲಯಗಳಿಗೆ ವಿಸ್ತರಿಸುವುದಾಗಿ ಹೇಳಿದೆ. ರಾಜ್ಯ ಮುಕ್ತ ವಿವಿ ಆಡಳಿತ ಮತ್ತು ಸರ್ಕಾರದ ಸಂಘರ್ಷದ ಹಿನ್ನಲೆಯಲ್ಲಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿರುವುದಾಗಿ ತಿಳಿದುಬಂದಿದೆ. ಇದಕ್ಕೆ ಸರ್ಕಾರ ನೀಡಿರುವ ಕಾರಣ ಇತರೆ ವಿಶ್ವವಿದ್ಯಾಲಯಗಳಿಗೆ ಪೂರಕ ಅನುದಾನ ನೀಡಲು ಸಾಧ್ಯವಾಗದಿರುವುದು!

ಸರ್ಕಾರ ದುಡುಕಿ ಸೇಡಿನ ಕ್ರಮ ಕೈಗೊಳ್ಳುವ ಮುಂಚೆ, ಮತ್ತೆ ಹಿಂದಿನ ವ್ಯವಸ್ಥೆಗೆ ಮರಳುವ ಮುನ್ನ ಇದರ ಸಾಧಕ ಬಾಧಕಗಳ ಬಗ್ಗೆ ಶಿಕ್ಷಣ ತಜ್ಞರೊಂದಿಗೆ ಚರ್ಚಿಸಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು ಎನಿಸುತ್ತದೆ. ಕರಾಮುವಿ ಹೊರತುಪಡಿಸಿ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ (ಎಲ್ಲವೂ ಅಲ್ಲದಿರಬಹುದು) ದೂರ ಶಿಕ್ಷಣದ ಗುಣಮಟ್ಟ, ಪರೀಕ್ಷಾ ಕ್ರಮ, ಫಲಿತಾಂಶ ಪ್ರಕಟಣೆ ಈ ಎ ಪ್ರಕ್ರಿಯೆಗಳು ಅದೆಷ್ಟು ಹದಗೆಟ್ಟಿದ್ದವು ಎನ್ನುವುದನ್ನು ಈ ಸಂದರ್ಭದಲ್ಲಿ ನಾವು ನೆನಪಿಸಿಕೊಳ್ಳಬೇಕಿದೆ.

ಅದೊಂದು ಪದವಿಯನ್ನು ಹರಾಜು ಹಾಕುವ ದಂಧೆಯಾಗಿ ಹೋಗಿತ್ತು. ವಿಶ್ವವಿದ್ಯಾಲಯದ ಸ್ಟಡಿ ಸೆಂಟರ್‌ಗಳು ಕಮಿಶನ್ ಏಜೆಂಟ್‌ಗಳಿಗಿಂತ ಕಡೆಯಾಗಿದ್ದವು. ಇನ್ನು ಪರೀಕ್ಷಾ ಕೇಂದ್ರಗಳ ಬಗ್ಗೆಯಂತೂ ಹೇಳುವುದೇ ಬೇಡ. ಅಸಹ್ಯ ಮೂಡುವಷ್ಟು ಅವ್ಯವಹಾರಗಳು ನಡೆಯುತ್ತಿದ್ದವು.

ವಿಶ್ವವಿದ್ಯಾಲಯಗಳ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ತಕ್ಕಮಟ್ಟಿಗೆ ಶಿಸ್ತು ಮತ್ತು ಪರೀಕ್ಷಾ ನಿಯಮಗಳನ್ನು ಪಾಲಿಸಲಾಗುತ್ತಿತ್ತು. ಇತರೆ ಊರುಗಳ ಎಷ್ಟೋ ಪರೀಕ್ಷಾ ಕೇಂದ್ರಗಳು ಎಲ್ಲಾ ನಿಯಮ, ಮೌಲ್ಯಗಳನ್ನು ಗಾಳಿಗೆ ತೂರಿ ಪದವಿಗಳನ್ನು ಅಗ್ಗಕ್ಕೆ ಮಾರುವ ಗೂಡಂಗಡಿಗಳಾಗಿದ್ದವು. ಇಲ್ಲಿ ಮೂರು ಹಂತದ ಸುಲಿಗೆ ನಡೆಯುತ್ತಿತ್ತು.

ಪರೀಕ್ಷಾ ಕೇಂದ್ರದಲ್ಲಿ ನೊಂದಣಿ ಮಾಡಿಕೊಂಡಾಗ, ಪ್ರವೇಶ ಪತ್ರ ಬಂದಾಗ ಮತ್ತು ಫಲಿತಾಂಶ ಬಂದಾಗ- ಹೀಗೆ ಮೂರು ಕೊಕ್ಕೆಯಲ್ಲಿ ವಿದ್ಯಾರ್ಥಿಗಳನ್ನು ಸಿಕ್ಕಿಸಿ ಸಾವಿರ ಗಟ್ಟಲೆ ದುಡ್ಡು ಕೀಳುತ್ತಿದ್ದರು. ಒಟ್ಟಾರೆ ಈ ಮೊತ್ತ ಕೆಲವೊಮ್ಮೆ ರೂ.25000 ಮೀರಿದ್ದೂ ಉಂಟು. ಈ ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಎಗ್ಗಿಲ್ಲದೆ ರಾಜಾರೋಷವಾಗಿ ಕಾಪಿ ಹೊಡೆಯಲು ಅವಕಾಶ ನೀಡಲಾಗುತ್ತಿತ್ತು.

ಪರೀಕ್ಷಾ ಕೇಂದ್ರದೊಳಗೆ ಮತ್ತು ಕೊಠಡಿಗಳೊಳಗೆ ಮೊಬೈಲ್, ಬೋಧನ ಸಾಮಗ್ರಿ, ನೋಟ್ಸ್ ತೆಗೆದುಕೊಂಡು ಹೋಗಲು ಅವಕಾಶ ನೀಡಲಾಗುತ್ತಿತ್ತು. ಪರೀಕ್ಷಾರ್ಥಿಗಳು ಪರಸ್ಪರ ಮಾತಾಡಿಕೊಂಡು, ಚರ್ಚಿಸಿಕೊಂಡು ಪುಸ್ತಕದಲ್ಲಿ ಸಿಗದಿದ್ದರೆ ಗೂಗಲ್ ಸರ್ಚ್ ಮಾಡಿ ಉತ್ತರ ಹುಡುಕಿ ಬರೆಯುತ್ತಿದ್ದರು.

ಪರೀಕ್ಷಾ ಮೇಲ್ವಿಚಾರಕರು ಹುಡುಗರನ್ನು ಕಾಯುತ್ತಿರಲಿಲ್ಲ, ಆಚೆ ಕಡೆ ಜಾಗೃತದಳದವರು ಬಂದಾರೆಯೇ ಎಂದು ನೋಡಲು ಬಾಗಿಲು ಕಾಯುತ್ತಿದ್ದರು. ಅಪ್ಪಿತಪ್ಪಿ ಜಾಗೃತದಳದವರೇನಾದರೂ ಬಂದರೆ ಕಾಪಿ ಹೊಡೆಯುತ್ತಿದ್ದ ವಿದ್ಯಾರ್ಥಿಗಳನ್ನು ಎಚ್ಚರಿಸುತ್ತಿದ್ದರು. ಇನ್ನು ಬಹುತೇಕ ಜಾಗೃತದಳದ ಸದಸ್ಯರೂ ಅಷ್ಟೇ, ಯಾವ ಕೋಣೆಯಲ್ಲೂ ಕಣ್ ಹಾಯಿಸದೆ ಕಚೇರಿಯ ಕುಳಿತು ತಿಂಡಿ, ಕಾಫಿ, ಬಕ್ಷೀಸು ಸ್ವೀಕರಿಸಿ ಹಾಗೇ ಹೊರಟು ಹೋಗುತ್ತಿದ್ದರು.

ವಿಪರ್ಯಾಸದ ಸಂಗತಿಯೆಂದರೆ ಈ ಕಾಪಿಚಟ್ ಪರೀಕ್ಷಾ ಕೇಂದ್ರಗಳಲ್ಲಿ ಪಾಸಾಗಲು ಯಾರೂ ಬರುತ್ತಿರಲಿಲ್ಲ, ಎಲ್ಲಾ ಶೇ.55 ಮೀರಿ ಅಂಕ ಗಳಿಸಿ ದೊಡ್ಡ ದೊಡ್ಡ ಹುದ್ದೆ ಗಿಟ್ಟಿಸಬೇಕೆಂಬ ಆಕಾಂಕ್ಷೆಯುಳ್ಳವರೇ! ಎಲ್ಲಾ ವಿಷಯಗಳಲ್ಲೂ ಆಂತರಿಕ ಮೌಲ್ಯ ಮಾಪನಕ್ಕೆಂದೇ 20-30 ಅಂಕಗಳಿರುತ್ತಿದ್ದವು. ಇದನ್ನು ವಿದ್ಯಾರ್ಥಿಗಳು ಮನೆಯ ಕೂತು ಬರೆದು ಕಳಿಸುತ್ತಿದ್ದರು. ಇಲ್ಲೂ ಅವ್ಯವಹಾರ, ವಶೀಲುಬಾಜಿ. ವಿವಿ ಸಿಬ್ಬಂದಿ, ಪ್ರಾಧ್ಯಾಪಕರೇ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಉತ್ತರ ಬರೆಸಿ ಮಿಕ್ಕವರಿಗೆ ದುಡ್ಡಿಗೆ ಮಾರಿ ಕೊಳ್ಳುತ್ತಿದ್ದರು. (ನನಗೆ ಗೊತ್ತಿರುವಂತೆ ಬೆಂಗಳೂರು ವಿಶ್ವವಿದ್ಯಾಲಯ ಇದಕ್ಕೆ ಅಪವಾದವಾಗಿತ್ತು.

2013-14ನೇ ಸಾಲಿನಲ್ಲೂ ಅಲ್ಲಿ ಈ ಆಂತರಿಕ ಅಂಕಗಳಿಗೂ ಚಿಕ್ಕದೊಂದು ಪರೀಕ್ಷೆಯನ್ನು ನೇರವಾಗಿ ಸೆಂಟ್ರಲ್ ಕಾಲೇಜಿಗೆ ಬಂದು ಬರೆಯಬೇಕಿತ್ತು. ಅಲ್ಲಿನ ವಿದ್ಯಾರ್ಥಿಯಾಗಿದ್ದ ನನಗೆ ಅಲ್ಲಿ ಯಾವ ವಶೀಲಿಬಾಜಿಯೂ ನಡೆದದ್ದು ಗಮನಕ್ಕೆ ಬಂದಿಲ್ಲ. ಪರೀಕ್ಷೆಗಳು ಶಿಸ್ತುಬದ್ಧವಾಗಿ ನಡೆಯುತ್ತಿದ್ದವು).

ಆಂತರಿಕ ಮೌಲ್ಯಮಾಪನದಲ್ಲಿ ಬಹುತೇಕ ಎಲ್ಲರಿಗೂ ಗರಿಷ್ಠ ಅಂಕ ಸಿಕ್ಕೇ ಸಿಗುತ್ತಿತ್ತು. ಇನ್ನು ಪ್ರಥಮ ದರ್ಜೆಗೆ ಬೇಕಾದ ಉಳಿದ 30-35 ಅಂಕಗಳಿಗಾಗಿ ವಿದ್ಯಾರ್ಥಿಗಳು ಈ ನಕಲು ಪರೀಕ್ಷಾಕೇಂದ್ರಗಳ ಮೊರೆ ಹೋಗುತ್ತಿದ್ದರು. ಕಲೆ, ವಾಣಿಜ್ಯ ವಿಷಯಗಳಿರಲಿ ಅನ್ವಯಿಕ ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ, ಕಂಪ್ಯೂಟರ್ ವಿಜ್ಞಾನ, ಗಣಿತಶಾಸ್ತ್ರ, ಸ್ನಾತಕೋತ್ತರ ಪರೀಕ್ಷೆಯಲ್ಲೂ ಕಾಪಿ ಹೊಡೆಸಿದರೆ ಶಿಕ್ಷಣದ ಗುಣಮಟ್ಟ ಏನಾಗಬಹುದು? ಈ ರೀತಿ ಶಿಕ್ಷಣದ ಮೌಲ್ಯ, ಶ್ರಮ ಗೊತ್ತಿಲ್ಲದೆ ಕಾಸಿಗೆ ಪದವಿ ಪಡೆದವರೇ ಬಹುಶಃ ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಓಎಂಆರ್ ಶೀಟ್ ತಿದ್ದುವುದರಿಂದ ಹಿಡಿದು ಎಲ್ಲಾ ಪರೀಕ್ಷಾ ಅವ್ಯವಹಾರಗಳಲ್ಲಿ ಭಾಗಿಯಾಗಿರಬಹುದು. ಅವರಲ್ಲಿ ಎಷ್ಟು ಜನ ಪ್ರೊಫೆಸರ್‌ಗಳಾಗಿ ನಮ್ಮ ಮಕ್ಕಳಿಗೆ ಅನ್ವಯಿಕ ವಿಜ್ಞಾನ ಇಲ್ಲವೇ ನೈತಿಕ ಶಿಕ್ಷಣದ ಶಂಖ ಊದುತ್ತಿರೋ ದೇವರೇ ಬಲ್ಲ!

ದೂರಶಿಕ್ಷಣದ ಉದ್ದೇಶ ನೇರವಾಗಿ ವಿವಿಗಳಲ್ಲಿ ದಾಖಲಾಗಿ ಓದು ಮುಂದುವರೆಸಲಾಗದವರು ಪದವಿ ಪಡೆಯಲು, ಉದ್ಯೋಗದಲ್ಲಿರುವವರು ತಮ್ಮ ಶೈಕ್ಷಣಿಕ ಅರ್ಹತೆಯನ್ನು ಹೆಚ್ಚಿಸಿಕೊಳ್ಳಲು ನೆರವಾಗುವುದೇ ಆಗಿದೆ. ಹಿಂದೆ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಕಡಿಮೆ ಇದ್ದಾಗ ದೂರದೂರಿಗೆ ಹೋಗಿ ಓದಲಾಗದ ಅಸಹಾಯಕತೆಗೆ ಹಾಗೂ ಚಿಕ್ಕವಯಸ್ಸಿನ ಮದುವೆಯಾಗಿ ಸಂಸಾರದ ಜವಾಬ್ದಾರಿಗೆ ಸಿಕ್ಕಿಕೊಳ್ಳುವ ಹೆಣ್ಣುಮಕ್ಕಳಿಗೆ ಇದೊಂದು ನಿಜಕ್ಕೂ ವರವಾಗಿತ್ತು.

ಉದ್ಯೋಗ ನೇಮಕಾತಿಗೆ ದೂರ ಶಿಕ್ಷಣದ ಪ್ರಮಾಣಪತ್ರ ಪರಿಗಣಿಸದ ಕಾಲವೂ ಇತ್ತು. ಆಗಂತೂ ಈ ದೂರಶಿಕ್ಷಣ ನಾಮಕೇವಾಸ್ಥೆ ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ ಎನ್ನುವಂತಾಗಿತ್ತು. ಉದ್ಯೋಗಕ್ಕೂ ದೂರಶಿಕ್ಷಣದ ಪದವಿ ಪ್ರಮಾಣಪತ್ರಗಳನ್ನು ಪರಿಗಣಿಸುವಂತಾದ ಮೇಲೆ ಹಲವು ಕಡೆ ಈ ಪಠ್ಯಗಳ ಹಾಗೂ ಪರೀಕ್ಷಾ ವಿಧಾನಗಳ ಗುಣಮಟ್ಟವನ್ನು ಉನ್ನತೀಕರಿಸಿದ್ದೂ ನಿಜ!

ಪ್ರಾಯೋಗಿಕ ತರಗತಿಗಳನ್ನು ಕಡ್ಡಾಯ ಮಾಡಲಾಯಿತು. ಮುಂಚೆ ಕಾಟಾಚಾರಕ್ಕೆ ಇದ್ದ ಸಂಪರ್ಕ ಕಾರ್ಯಕ್ರಮಗಳನ್ನು (ಕಾಂಟ್ಯಾಕ್ಟ್ ಪ್ರೋಗ್ರಾಮ್ಸ್) ಕಡ್ಡಾಯಗೊಳಿಸಲಾಯಿತು. ದಕ್ಷತೆ, ನ್ಯೂನತೆ ಒಂದೇ ನಾಣ್ಯದ ಎರಡು ಮುಖಗಳು. ಒಂದೆಡೆ ಗುಣಮಟ್ಟ ಸುಧಾರಣೆ ಆದರೆ ಅದು ನಗಣ್ಯ ಎನ್ನುವಷ್ಟರ ಮಟ್ಟಿಗೆ ಇದೊಂದು ಬೃಹತ್ ದಂಧೆಯಾಗಿ ಬದಲಾಯಿತು.

ಹಿಂದಿನ ಸರ್ಕಾರ ಎಲ್ಲಾ ವಿವಿಗಳ ದೂರಶಿಕ್ಷಣ ವಿಭಾಗ ಮುಚ್ಚಿ ಕರಾಮುವಿಗೆ ವಹಿಸಿದ್ದರ ಹಲವು ಉದ್ದೇಶಗಳಲ್ಲಿ ಇದೇ ಪ್ರಮುಖವಾದ ಕಾರಣ ಇರಬಹುದು. ಒಂದು ವೇಳೆ ಸರ್ಕಾರ ಈ ಹಿಂದಿನಂತೆ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ದೂರಶಿಕ್ಷಣ ಪದವಿ, ಸ್ನಾತಕೋತ್ತರ ಪದವಿ ನೀಡಲು ಅವಕಾಶ ನೀಡಿದರೆ ಈ ಎಲ್ಲಾ ಕೊಳೆತ ಮಂಡಲಗಳು ಮತ್ತೆ ಹೆಡೆಯೆತ್ತಿ ನಿಲ್ಲುತ್ತವೆ.

ಬಹಳಷ್ಟು ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ಹಲವು ವಿಶ್ವ ವಿದ್ಯಾಲಯಗಳಲ್ಲಿ ಸಿಬ್ಬಂದಿಗೆ, ಪ್ರಾಧ್ಯಾಪಕರಿಗೆ ಸಂಬಳ ಕೊಡಲೂ ದುಡ್ಡಿಲ್ಲ. ಹಲವು ವಿವಿಗಳನ್ನು (ಸುಮಾರು 9 ವಿವಿಗಳು) ಸರ್ಕಾರವೇ ಮುಚ್ಚಲು ಹೊರಟಿದೆ ಎಂದು ಈ ಹಿಂದೆ ವರದಿಯಾಗಿತ್ತು. ಇದೆ ಸರಿಯೇ! ಆದರೆ ವಿಶ್ವವಿದ್ಯಾಲಯಗಳ ಪುನಶ್ಚೇತನಕ್ಕೆಂದು ದೂರಶಿಕ್ಷಣಕ್ಕೆ ಅವಕಾಶ ಮಾಡಿಕೊಡುವ ಮುನ್ನ ಸರ್ಕಾರ ಕೆಲವು ಹೊಸ ನೀತಿ, ನಿಯಮಗಳನ್ನು ಪ್ರಕಟಿಸಬೇಕು.

ಮುಖ್ಯವಾಗಿ ಶಿಕ್ಷಣದ ಗುಣಮಟ್ಟದೊಂದಿಗೆ ಯಾವುದೇ ರಾಜಿ ಮಾಡಿಕೊಳ್ಳದೆ ಕ್ರಮಬದ್ಧ ಮತ್ತು ನ್ಯಾಯಸಮ್ಮತ ಪರೀಕ್ಷೆಗಳು ನಡೆಯುವ ಖಾತರಿ ಸಿಗಬೇಕು. ಕರಾಮುವಿ ಹಿಡಿತದಿಂದ ದೂರಶಿಕ್ಷಣವನ್ನು ಹಿಂದಿನಂತೆ ವಿಕೇಂದ್ರೀಕರಣಗೊಳಿಸುವುದು ತಪ್ಪೇನಲ್ಲ, ಆದರೆ ತಕ್ಕಮಟ್ಟಿಗೆ ದೂರಶಿಕ್ಷಣದ ಮಾನಮರ್ಯಾದೆ ಕಾಪಾಡಿರುವ ಕರಾಮುವಿ ತೆಕ್ಕೆಯಿಂದ ಏಕಸ್ವಾಮ್ಯವನ್ನು ಕಿತ್ತುಕೊಳ್ಳುವ ಮೊದಲು ಸರ್ಕಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾದರಿಯಲ್ಲಿ ದೂರಶಿಕ್ಷಣ ಪರೀಕ್ಷಾ ಪ್ರಾಧಿಕಾರ ಸ್ಥಾಪಿಸಿ ಎಲ್ಲಾ ವಿವಿಗಳು ಅದರಡಿ ಕಾರ್ಯನಿರ್ವಹಿಸುವಂತೆ ಮಾಡಿ ಪದವಿಗಳು ಬಿಕರಿಯಾಗದಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು.

**- ತುರುವೇಕೆರೆ** ಪ್ರಸಾದ್



## ಕಂಬಿ

ಆ ಕಂಬಿಯ ಒಳಗೆ ಸುತ್ತ ಕಟ್ಟಿದ ಗೋಡೆಯನ್ನ ಮತ್ತೆ ಮತ್ತೆ ನೋಡುತ್ತಲೇ ಇದ್ದಾನೆ. ಕಂಬಿಗಳನ್ನ ಎಣಿಸಿ ಎಣಿಸಿ ಮನಸ್ಸು ಭಾರವಾಗಿಬಿಟ್ಟಿದೆ. ಪ್ರತಿದಿನವೂ ಆಗಿ ಹೋದ ಘಟನೆ ಕಣ್ಣೀರುಳಿಯುವಂತೆ ಮಾಡುತ್ತಿದೆ. ಆ ದಿನ ಒಂದು ಚೂರು ಹೆಚ್ಚೇ ಕುಡಿದಿದ್ದ. ಸಿಟ್ಟು ಏನನ್ನು ಮಾಡಿಸುತ್ತೆ ಅನ್ನೋದಕ್ಕೆ ಅವನೇ ಉದಾಹರಣೆಯಾಗಿದ್ದಾನೆ. ಮನೆಯಲ್ಲಿ ಅಪ್ಪ-ಅಮ್ಮನನ್ನ ನೋಡಿಕೊಳ್ಳುವುದಕ್ಕೆ ಮಾತುಕತೆ ಅಣ್ಣ-ತಮ್ಮಂದಿರ ನಡುವೆ ಶುರುವಾಗಿತ್ತು. ಆದರೆ ಕುಡಿತದ ಮಿತಿ ಹೆಚ್ಚಿದ ಕಾರಣ ಮಾತಿನಲ್ಲಿ ನಾಲಗೆ ತೊದಲುವುದ್ದಕ್ಕೆ ಪ್ರಾರಂಭವಾಯಿತು.

ಯೋಚನೆಗೂ ನಾಲಗೆಗೂ ಕಡಿತ ತಪ್ಪಿ ಹೋಯಿತು ನಾಲಗೆ ಹೊಸ ಹೊಸ ಮಾತು ವಿಚಾರಗಳನ್ನ ಮಾತನಾಡುವುದಕ್ಕೆ ಶುರು ಮಾಡಿದ್ದು. ಆಗ ಕೈ ಸುಮ್ಮನಿರಲಿಲ್ಲ ಕೈಗೆ ತನಗೆ ಸಿಕ್ಕ ವಸ್ತುವಿನಿಂದ ಎದುರಾಳಿಯ ಮೇಲೆ ಬಲವಾಗಿ ಬೀಸುವುದಕ್ಕೆ ಆರಂಭವಾಯಿತು. ಆ ಕ್ಷಣವನ್ನು ನೋಡಿ ದೇವರಿಗೆ ಬೇಜಾರಲ್ಲಿ ಇರಬೇಕು ಹೊರಟುಬಂದು ಬಿಡಿ ಅಂತ ಅಂದುಬಿಟ್ಟ. ಅಣ್ಣ ಹೊಡೆದ ಹೊಡೆತ ತಮ್ಮನ ಕುತ್ತಿಗೆಗೆ ಬಡಿದು ಕ್ಷಣದಲ್ಲಿ ಆತನ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ಏನಾಗುತ್ತಿದೆ ಎಂದು ಅರಿವಾಗುವಷ್ಟರಲ್ಲಿ ಆತ ಜೈಲಿನಲ್ಲಿ ಬಂದು ಬಿದ್ದಿದ್ದ ನನ್ನ ಕೈಯಿಂದಾದದ್ದಲ್ಲ ನನಗೆ ತಮ್ಮನೇ ಪ್ರಾಣ ಹೀಗೆ ಏನೇ ಹೇಳಿದ್ರು, ಕೇಳುವವರು ತಯಾರಿರ್ಲಿಲ್ಲ.

ಮನೆಯಲ್ಲಿ ಅಪ್ಪ ಅಮ್ಮ ಇಬ್ಬರೂ ಅನಾಥರಾಗಿ ಬಿಟ್ರು. ಅವರನ್ನು ಪಾಲು ಮಾಡುವವರು ಒಬ್ಬ ಸ್ಮಶಾನದೊಳಗೆ, ಇನ್ನೊಬ್ಬ ಸೆರೆಮನೆಯ ಒಳಗೆ ಮಲಗಿಬಿಟ್ಟಿದ್ದರು.

**- ಧೀರಜ್** ಬೆಳ್ಳಾರೆ

# ಹಕ್ಕಿ-ಹಾವುಗಳಂತೆ ಬಣ್ಣಬಣ್ಣದ ಸಸ್ತನಿಗಳು ಯಾಕಿಲ್ಲ?

ಬಹುಪಾಲು ಸಸ್ತನಿಗಳ ರೋಮಗಳ ಬಣ್ಣ ಕಂದು ಅಥವಾ ಕಪ್ಪು ಎಂಬುದನ್ನು ಗಮನಿಸಿದ್ದೀರಾ? ಹಕ್ಕಿಗಳು, ಹಾವುಗಳು ಅಥವಾ ಮೀನುಗಳಂತೆ ಆಕರ್ಷಕ ಕೆನ್ನೀಲಿ, ಗುಲಾಲಿ, ನೇರಳೆ ಅಥವಾ ಹಳದಿ ಬಣ್ಣಗಳ ಸಸ್ತನಿಗಳು ಯಾಕಿಲ್ಲ?

ಸಸ್ತನಿಗಳಲ್ಲಿ ಕಾಣಿಸುವ ಕಂದು, ಕಪ್ಪು ಮತ್ತು ಬಿಳಿ ಬಣ್ಣಗಳ ರೋಮಗಳಿಗೆ ಹಲವು ಕಾರಣಗಳಿವೆ. ಸಸ್ತನಿಗಳಲ್ಲಿ ಮೈಬಣ್ಣ ಹೇಗೆ ಅಭಿವ್ಯಕ್ತವಾಗುತ್ತದೆ ಎಂಬುದು ಮೊದಲ ಕಾರಣ. ಬೆಲ್ಜಿಯಂನ ಘೆಂಟ್ ವಿಶ್ವವಿದ್ಯಾಲಯದ ವಿಕಾಸ-ಜೀವಶಾಸ್ತ್ರಜ್ಞ ಮಾಥ್ಯೂ ಷಾಕಿ ಇದನ್ನು ಹೀಗೆ ವಿವರಿಸುತ್ತಾರೆ: ಪ್ರಾಣಿಗಳು ಎರಡು ಮುಖ್ಯ ನಮೂನೆಗಳಲ್ಲಿ ತಮ್ಮ ಬಣ್ಣಗಳನ್ನು ಪ್ರದರ್ಶಿಸುತ್ತವೆ - ವರ್ಣಕಗಳು (ಪಿಗ್-ಮೆಂಟ್ಸ್) ಮತ್ತು ರಚನೆಗಳ (ಸ್ಟ್ರಕ್ಚರ್ಸ್) ಮೂಲಕ. ವರ್ಣಕಗಳು ಪ್ರಾಣಿಗಳ ಚರ್ಮದಲ್ಲಿದ್ದು, ಬೆಳಕನ್ನು ಪ್ರತಿಫಲಿಸುವ ಅಥವಾ ಹೀರುವ ಮೂಲಕ ನಿರ್ದಿಷ್ಟ ಬಣ್ಣಗಳನ್ನು ಸೃಷ್ಟಿಸುತ್ತವೆ. ರಚನೆಗಳ ಮೂಲಕ ಪ್ರಾಣಿಗಳ ಬಣ್ಣಗಳು ಕಾಣಿಸಲು ಕಾರಣ ಚರ್ಮ, ಗರಿಗಳು ಅಥವಾ ಶಲ್ಕ (ಸ್ಕೇಲ್)ಗಳಲ್ಲಿರುವ ವಿವಿಧ ಆಕಾರ ಮತ್ತು ವಿನ್ಯಾಸಗಳ ನ್ಯಾನೋ-ಶಲ್ಕಗಳು. ಇವು ಬೆಳಕನ್ನು ವಿಕೃತಿ (ಡಿಸ್-ಟೋರ್ಟ್) ಮಾಡುವ ಮೂಲಕ ಹೊಳೆಯುವ, ವರ್ಣದೀಪ್ತಿಯ (ಇರಿಡಿಸೆಂಟ್) ಬಣ್ಣಗಳನ್ನು ಪ್ರದರ್ಶಿಸುತ್ತವೆ.

ಪ್ರಾಣಿಗಳು ತಮ್ಮ ಮೈಬಣ್ಣ ಪ್ರದರ್ಶಿಸಲು ಈ ಎರಡು ನಮೂನೆಗಳಲ್ಲಿ ಒಂದನ್ನು ಕೆಲವೊಮ್ಮೆ ಎರಡೂ ನಮೂನೆಗಳನ್ನು ಬಳಸುತ್ತವೆ. ಆದರೆ, ಸಸ್ತನಿಗಳು ಇವೆರಡೂ ನಮೂನೆಗಳನ್ನು ಬಳಸುವುದಿಲ್ಲ ಎನ್ನುತ್ತಾರೆ ಷಾಕಿ. ಕೆರೋಟಿನಾಯ್ಡುಗಳು, ಪೋರ್-ಫೈರಿನ್-ಗಳು, ಟೆರಿನ್-ಗಳು - ಇಂತಹ ಬಣ್ಣ ಉತ್ಪಾದಿಸುವ ವಿವಿಧ ವರ್ಣಕಗಳಲ್ಲಿ ಸಸ್ತನಿಗಳು ಮೆಲಾನಿನ್ ಎಂಬ ಒಂದು ವರ್ಣಕವನ್ನು ಮಾತ್ರ ಬಳಸುತ್ತವೆ. ಸಸ್ತನಿಗಳು ಪ್ರದರ್ಶಿಸುವ ಎಲ್ಲ ಬಣ್ಣಗಳಿಗೂ ಇದೊಂದೇ ವರ್ಣಕ ಕಾರಣ; ಇದು ಇಲ್ಲದಿರುವ ಮೈಭಾಗಗಳಲ್ಲಿ (ಉದಾಹರಣೆಗೆ ಜೀಬ್ರಾಗಳು ಮತ್ತು ಪಾಂಡಾಗಳಲ್ಲಿ) ಬಿಳಿ ಬಣ್ಣ ಕಾಣಿಸುತ್ತದೆ ಎನ್ನುತ್ತಾರೆ.

ಅದಲ್ಲದೆ, ಸಸ್ತನಿಗಳ ರೋಮಗಳು ಅವು ಪ್ರದರ್ಶಿಸಬಲ್ಲ ಬಣ್ಣಗಳಿಗೆ ಮಿತಿ ಹೇರುತ್ತವೆ. ಹಕ್ಕಿಗಳ ಗರಿಗಳು, ಮೀನುಗಳ ಶಲ್ಕಗಳು ಮತ್ತು ಚರ್ಮ - ಇವುಗಳಂತೆ ರೋಮಗಳು ಸಂಕೀರ್ಣ ರಚನೆಗಳಲ್ಲ. ಆದ್ದರಿಂದ, ನ್ಯಾನೋ ಶಲ್ಕ ವಿನ್ಯಾಸಗಳು ಇಲ್ಲದಿರುವ ಕಾರಣ, ರಚನೆಗಳನ್ನು ಅವಲಂಬಿಸಿದ ಬಣ್ಣಗಳನ್ನು ಸಸ್ತನಿಗಳು ಪ್ರದರ್ಶಿಸಲಾರವು ಎಂದು ಅವರು ವಿವರಿಸುತ್ತಾರೆ.

ಆದರೆ, ಹೊಳೆಯುವ ಕೆಂಪು ಮತ್ತು ನೀಲಿ ಬಣ್ಣಗಳನ್ನು ಪ್ರದರ್ಶಿಸುವ ಮಾನ್-ಡ್ರಿಲ್-ಗಳು ಸಸ್ತನಿಗಳ ಈ ನಿಯಮಕ್ಕೆ ಅಪವಾದ. ಅದೇನಿದ್ದರೂ, ಅವು ಈ ಬಣ್ಣಗಳನ್ನು ಪ್ರದರ್ಶಿಸುವುದು ತಮ್ಮ ಮೈಯಲ್ಲಿ ರೋಮ ಹೊದಿಕೆ ಇಲ್ಲದಿರುವ ಜಾಗಗಳಲ್ಲಿ ಮಾತ್ರ. ಸ್ಲೋತ್-ಗಳ ಮೈಯಲ್ಲಿ ಕೆಲವೊಮ್ಮೆ ಕೆಲವೆಡೆ ಹಸುರು ಬಣ್ಣ ಕಾಣಿಸುತ್ತದೆ. ಇದಕ್ಕೆ ಕಾರಣ ಅವುಗಳ ರೋಮ ಹೊದಿಕೆಯ ಮೇಲೆ ಬೆಳೆಯುವ ಪಾಚಿ!



ಮೂಲ ಕಾರಣ: ಸಸ್ತನಿಗಳಲ್ಲಿ ಹೊಳೆಯುವ ಬಣ್ಣಗಳು ಇಲ್ಲದಿರಲು ಮೂಲ ಕಾರಣ ಏನು? ವಿಜ್ಞಾನಿಗಳು ನೀಡುವ ಒಂದು ವಿವರಣೆ ಹೀಗಿದೆ:

ಈ ಭೂಮಿಯಲ್ಲಿ ಸಸ್ತನಿಗಳು ಮೊದಲು ಕಾಣಿಸಿಕೊಂಡಾಗ, ದೈತ್ಯ ಡೈನೋಸಾರ್-ಗಳು ಮುಖ್ಯ ಪರಭಕ್ಷಕಗಳು ಆಗಿದ್ದವು ಮತ್ತು ಸಸ್ತನಿಗಳು ಬಲಿಪ್ರಾಣಿಗಳಾಗಿದ್ದವು. ಡೈನೋಸಾರ್-ಗಳಿಗೆ ಆಹಾರ ಆಗುವುದರಿಂದ ಪಾರಾಗುವುದಕ್ಕಾಗಿ 100 ಮಿಲಿಯನ್ ವರುಷಗಳಿಗಿಂತ ಅಧಿಕ ಅವಧಿಯಲ್ಲಿ ಸಸ್ತನಿಗಳು ನಿಶಾಚರಿಗಳು ಆಗಿದ್ದವು (ಈಗಲೂ ಹಲವು ಸಸ್ತನಿಗಳು ನಿಶಾಚರಿಗಳಾಗಿಯೇ ಉಳಿದಿವೆ.)

ಈ ಮಿಲಿಯಗಟ್ಟಲೆ ವರುಷಗಳ ಜೀವನವಿಧಾನ ಸಸ್ತನಿಗಳು ಹೇಗಿವೆ ಎಂಬುದರ ಮೇಲೆ ಪ್ರಧಾನ ಪರಿಣಾಮ ಬೀರಿದೆ. ಸೈನ್ಸ್ ಜರ್ನಲಿನಲ್ಲಿ ಪ್ರಕಟವಾಗಿರುವ 2025ರ ಒಂದು ಅಧ್ಯಯನ ವರದಿಯಲ್ಲಿ (ಷಾಕಿ ಅದರ ಸಹಲೇಖಕರು) ಆಸಕ್ತಿದಾಯಕ ಸಂಗತಿಯೊಂದು ದಾಖಲಾಗಿದೆ. ಅಧ್ಯಯನ ತಂಡವು ಈಗಿನ ಸಸ್ತನಿಗಳ ಮೆಲನೊಸೋಮ್ಸ್ ಎಂಬ ವರ್ಣಕ-ಶೇಖರಣಾ ರಚನೆಗಳನ್ನು ಜುರಾಸಿಕ್ ಮತ್ತು ಕ್ರೆಟಾಸಿಯಸ್ ಕಾಲಮಾನದ ಆರು ಸಸ್ತನಿಗಳ ಪಳೆಯುಳಿಕೆಗಳ ಸಂರಕ್ಷಿಸಲ್ಪಟ್ಟ ಮೆಲನೊಸೋಮ್ಸ್-ಗಳೊಂದಿಗೆ ಹೋಲಿಸಿತು. ಎಲ್ಲ ಸಸ್ತನಿ ಪಳೆಯುಳಿಕೆಗಳೂ ಕಂದು ಅಥವಾ ಬೂದು ಬಣ್ಣಗಳ ಛಾಯೆಗಳಾಗಿದ್ದವು.

ಪ್ರಾಚೀನ ಕಾಲದ ಈ ಪ್ರಾಣಿಗಳು ಮುಖ್ಯವಾಗಿ ಕತ್ತಲಿನಲ್ಲಿ ಬದುಕುತ್ತಿದ್ದ ಕಾರಣ ಪರಭಕ್ಷಕಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಸಸ್ತನಿಗಳಿಗೆ ಅವುಗಳ ಗಾಢ ಬಣ್ಣಗಳಿಂದ ಸಹಾಯವಾಯಿತು.

66 ಮಿಲಿಯನ್ ವರುಷಗಳ ಹಿಂದೆ ಪಕ್ಷಿಗಳಲ್ಲದ ಡೈನೋಸಾರ್-ಗಳು ಅಳಿದು ಹೋದವು. ಆಗಿನಿಂದ ಸಸ್ತನಿಗಳ ವೈವಿಧ್ಯತೆಯಲ್ಲಿ ಭಾರೀ ಹೆಚ್ಚಳವಾಗಿ, ಈಗ 6,000ಕ್ಕಿಂತ ಅಧಿಕ ಸ್ಪಿಷಿಸುಗಳಿವೆ. ಈಗ ನಿಶಾಚರಿ ಮತ್ತು ದಿವಾಚಾರಿ ಸಸ್ತನಿಗಳಿದ್ದು, ಇವುಗಳ ಮೇಲೆ ದಾಳಿ ಮಾಡುವ ಪರಭಕ್ಷಕಗಳಿಲ್ಲ. ಆದರೂ ಬಹುಪಾಲು ಸಸ್ತನಿಗಳ ಬಣ್ಣ ಈಗಲೂ ಕಂದು, ಬೂದು ಅಥವಾ ಕಪ್ಪು.


**- ಅಡ್ಡೂರು** ಕೃಷ್ಣ ರಾವ್

# ಅರಕಲಗೂಡು ತಾಲ್ಲೂಕಿನಲ್ಲಿ ಮಳೆ ಕೊರತೆ: ರೈತರಿಗೆ ಸಂಕಷ್ಟ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನಲ್ಲಿ ಮಳೆ ಕೊರತೆಯಿಂದಾಗಿ ವಿವಿಧ ಬೆಳೆಗಳ ಬಿತ್ತನೆ ಕಾರ್ಯಕ್ಕೆ ತೊಡಕಾಗಿದ್ದು ರೈತರಿಗೆ ಆರಂಭದಲ್ಲೇ ಆರ್ಥಿಕವಾಗಿ ನಷ್ಟ ಎದುರಿಸುವಂತಾಗಿದ್ದು, ಮುಂಗಾರು ಪೂರ್ವ ಮಳೆಯೂ ಸರಿಯಾಗಿ ಬಿದ್ದಿಲ್ಲ. ಹಲವೆಡೆ ಅಲ್ಲಲ್ಲಿ ಬಿದ್ದ ಸಾಧಾರಣ ಮಳೆಗೆ ಕೃಷಿ ಭೂಮಿ ಉಳುಮೆ ನಡೆಸಿ, ಗೊಬ್ಬರ ಸಾಗಿಸಿ ಬಿತ್ತನೆಗೆ ಸಿದ್ಧಗೊಳಿಸಿದ್ದಾರೆ. ದುರದೃಷ್ಟವಶಾತ್ ಸಕಾಲದಲ್ಲಿ ಬಿತ್ತನೆ ಕಾರ್ಯ ಕೈಗೊಳ್ಳಲು ಹದ ಮಳೆಯಾಗದೆ ರೈತರನ್ನು ಚಿಂತೆಗೀಡು ಮಾಡಿದೆ.

ಕೃಷಿ ಇಲಾಖೆ ಮಾಹಿತಿ ಪ್ರಕಾರ ಪ್ರಸಕ್ತ ಸಾಲಿಗೆ ಮುಂಗಾರು ಹಂಗಾಮಿನಲ್ಲಿ 47511 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆ ಗುರಿ ಹೊಂದಿದ್ದು ಮಳೆಯಾಗದೆ ಕೇವಲ 760 ಹೆಕ್ಟೇರ್ ಪ್ರದೇಶದಲ್ಲಷ್ಟೇ ಬಿತ್ತನೆ ಮಾಡಲಾಗಿದ್ದು ಶೇ. 1.60ರಷ್ಟು ಶೂನ್ಯ ಸಾಧನೆಯಾಗಿದೆ. ಮಳೆಯಾಶ್ರಿತ ಪ್ರದೇಶದಲ್ಲಿ 7006 ಹೆಕ್ಟೇರ್‌ನಲ್ಲಿ ಮತ್ತು ನೀರಾವರಿ ಪ್ರದೇಶದಲ್ಲಿ 285 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆ ಗುರಿ ಹೊಂದಿದ್ದು ಶೂನ್ಯ ಸಾಧನೆಯಾಗಿದೆ. ಮಳೆ



ಯಾಶ್ರಿತ ಪ್ರದೇಶದಲ್ಲಿ 20323 ಹೆಕ್ಟೇರ್‌ನಲ್ಲಿ ಮುಸುಕಿನ ಜೋಳ ಬಿತ್ತಬೇಕಿದ್ದು ಮಳೆಯಿಲ್ಲದೆ ಬಿತ್ತನೆ ಮಾಡಲಾಗಿಲ್ಲ ಮತ್ತು ನೀರಾವರಿ ಆಶ್ರಯದಲ್ಲಿ 2200 ಹೆಕ್ಟೇರ್ ಬದಲಿಗೆ ಕೇವಲ 70 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಲಾಗಿದೆ. 39457 ಹೆಕ್ಟೇರ್ ಪ್ರದೇಶದಲ್ಲಿ ಏಕದಳ ಧಾನ್ಯ ಬೆಳೆಗಳ ಬಿತ್ತನೆ ಹೊಂದಿದ್ದು 70 ಹೆಕ್ಟೇರ್‌ನಲ್ಲಷ್ಟೇ ಬಿತ್ತನೆಯಾಗಿದೆ. 10 ಹೆಕ್ಟೇರ್‌ನಲ್ಲಿ ಉದ್ದು ಬಿತ್ತನೆ ಮಾಡಬೇಕಿದ್ದು ಶೂನ್ಯ ಸಾಧನೆಯಾಗಿದೆ.

ಮಳೆಯಾಶ್ರಿತ ಪ್ರದೇಶದಲ್ಲಿ 2628 ಹೆಕ್ಟೇರ್‌ನಲ್ಲಿ ಅಲಸಂದೆ ಗುರಿ ಹೊಂದಿದ್ದು 130 ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ನೀರಾವರಿ ಪ್ರದೇಶದಲ್ಲಿ 137 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಬೇಕಿದ್ದು ಶೂನ್ಯ ಸಾಧನೆಗಿದೆ. ಮಳೆಯಾಶ್ರಿತ ಪ್ರದೇಶದಲ್ಲಿ 50 ಹೆಕ್ಟೇರ್‌ನಲ್ಲಿ ತೊಗರಿ ಹಾಗೂ ತಲಾ 75 ಹೆಕ್ಟೇರ್‌ನಲ್ಲಿ ಹುರುಳಿ ಮತ್ತು ಹೆಸರು ಬಿತ್ತಬೇಕಿದ್ದು ಶೂನ್ಯ ಸಾಧನೆಯಾಗಿದೆ. ಒಟ್ಟು 2975 ಹೆಕ್ಟೇರ್ ಪ್ರದೇಶದಲ್ಲಿ ದ್ವಿದಳ ಧಾನ್ಯ ಬೆಳೆಗಳನ್ನು ಬಿತ್ತಬೇಕಿದ್ದು, 130 ಹೆಕ್ಟೇರ್ ಕಡಿಮೆ ಪ್ರದೇಶದಲ್ಲಿ ಬಿತ್ತನೆಯಾಗಿದೆ. ತಲಾ 10 ಹೆಕ್ಟೇರ್ ನಲ್ಲಿ ನೆಲ್ಲಡಲೆ ಎಣ್ಣೆಕಾಳು ಬೆಳೆಗಳನ್ನ ಬಿತ್ತನೆ ಗುರಿ ಹೊಂದಿದ್ದು ಶೂನ್ಯ ಸಾಧನೆಯಾಗಿದೆ. 5069 ಹೆಕ್ಟೇರ್ ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳ ಬಿತ್ತನೆ ಗುರಿ ಹೊಂದಿದ್ದು 560 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ.

ಕಸಬಾ ಹೋಬಳಿಯಲ್ಲಿ ಮಳೆಯಾಶ್ರಿತ ಪ್ರದೇಶದಲ್ಲಿ 1600 ಹೆಕ್ಟೇರ್ ಪ್ರದೇಶದಲ್ಲಿ ಮತ್ತು ನೀರಾವರಿ ಪ್ರದೇಶದಲ್ಲಿ 60 ಹೆಕ್ಟೇರ್ ರಾಗಿ ಬಿತ್ತನೆ ಗುರಿ ಹೊಂದಿದ್ದು ಮಳೆ ಇಲ್ಲದೆ ಶೂನ್ಯ ಸಾಧನೆಯಾಗಿದೆ. ಮಳೆಯಾಶ್ರಿತ ಪ್ರದೇಶದಲ್ಲಿ 5223 ಹೆಕ್ಟರ್‌ನಲ್ಲಿ ಮುಸುಕಿನ ಜೋಳ, ನೀರಾವರಿ 540 ಹೆಕ್ಟೇರ್ ಗುರಿ ಹೊಂದಿದ್ದು ಕೇವಲ 15 ಹೆಕ್ಟೇರ್ ಪ್ರದೇಶದಲ್ಲಿ

> ಮಳೆಯ ಮುನಿಸು ಕೃಷಿ ಚಟುವಟಿಕೆ, ಬಿತ್ತನೆ ಕಾರ್ಯದ ಮೇಲೆ ದುಷ್ಪರಿಣಾಮ ಬೀರಿದೆ. ರೈತರಿಗೆ ರೈತ ಸಂಪರ್ಕ ಕೇಂದ್ರ ಮೂಲಕ ವಿವಿಧ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗಿದೆ. ಆದರೆ ವಾಡಿಕೆ ಮಳೆ ಬೀಳದ ಬಿತ್ತನೆ ಮಾಡಲು ಸಮಸ್ಯೆಯಾಗಿದೆ.
> – ಕೆ.ಜಿ. ಕವಿತ, ಸಹಾಯಕ ಕೃಷಿ ನಿರ್ದೇಶಕಿ, ಅರಕಲಗೂಡು.

ಬಿತ್ತನೆಯಾಗಿದೆ. 9273 ಹೆಕ್ಟೇರ್ ಪ್ರದೇಶದಲ್ಲಿ ದ್ವಿದಳ ಧಾನ್ಯಗಳ ಗುರಿ ಸಾಧನೆಗೆ ಕೇವಲ 15 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಲಾಗಿದೆ. ಮಳೆಯಾಶ್ರಿತ ಪ್ರದೇಶದಲ್ಲಿ 438 ಹೆಕ್ಟೇರ್ ಪ್ರದೇಶದಲ್ಲಿ ಅಲಸಂದೆ ಬಿತ್ತನೆ ಗುರಿ ಹೊಂದಿದ್ದು, 20 ಹೆಕ್ಟೇರ್‌ನಲ್ಲಷ್ಟೇ ಬಿತ್ತಲಾಗಿದೆ.

ರಾಮನಾಥಪುರ ಹೋಬಳಿಯಲ್ಲಿ ಒಟ್ಟು 10313 ಹೆಕ್ಟೇರ್ ಗುರಿ ಹೊಂದಿದ್ದು 295 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಲಾಗಿದೆ. ಕೊಣನೂರು ಹೋಬಳಿಯಲ್ಲಿ ಒಟ್ಟು 10479 ಹೆಕ್ಟೇರ್ ಗುರಿ ಹೊಂದಿದ್ದು 215 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ. ಮಲ್ಲಿಪಟ್ಟಣ ಹೋಬಳಿಯಲ್ಲಿ ಒಟ್ಟು 6558 ಹೆಕ್ಟೇರ್ ಗುರಿ ಹೊಂದಿದ್ದು ಮಳೆಯಿಲ್ಲದೆ ಕೇವಲ 70 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ಸಾಧನೆಯಾಗಿದೆ. ಮಲ್ಲಿಪಟ್ಟಣ ಹೋಬಳಿಯಲ್ಲಿ ಮಳೆ ಕೊರತೆ ಪರಿಣಾಮ ಕಾಫಿ ಹೂ ಹೊಡೆಯಲು ತೊಡಕಾಗಿದ್ದು ಇದು ಇಳುವರಿ ಮೇಲೆ ಹೊಡೆತ ಬೀಳಲಿದೆ.

**ವಾಡಿಕೆ ಮಳೆ ವಿವರ:** ಪ್ರಸಕ್ತ ಜನವರಿ ತಿಂಗಳಿನಲ್ಲಿ 2.3 ಮಿಮೀ ವಾಡಿಕೆ ಮಳೆಯಾಗಬೇಕಿದ್ದು 1.1 ಮಿಮೀ ಬಿದ್ದಿದ್ದು 52ರಷ್ಟು ಕೊರತೆಯಾಗಿದೆ. ಫೆಬ್ರವರಿ ತಿಂಗಳಿನಲ್ಲಿ 2.7 ಮಿಮೀ ವಾಡಿಕೆ ಮಳೆ ಆಗಬೇಕಿದ್ದು 6.6 ಮಿಮೀ ಬಿದ್ದಿದ್ದು 144 ಮಿಮೀ ಅಧಿಕ ಮಳೆಯಾಗಿದೆ. ಮಾರ್ಚ್ ತಿಂಗಳಿನಲ್ಲಿ 13.6 ಮಿಮೀ ವಾಡಿಕೆ ಮಳೆಯಾಗಬೇಕಿದ್ದು 16.9 ಮಿಮೀ ಮಳೆಯಾಗಿದ್ದು 24ರಷ್ಟು ಹೆಚ್ಚು ಬಿದ್ದಿದೆ. ಏಪ್ರಿಲ್ ತಿಂಗಳಿನಲ್ಲಿ 51.4 ಮಿಮೀ ವಾಡಿಕೆ ಮಳೆಯಾಗಬೇಕಿದ್ದು, 19.8 ಮಿಮೀ ಮಳೆಯಾಗಿದ್ದು 61ರಷ್ಟು ಕಡಿಮೆಯಾಗಿದೆ. ಮೇ ತಿಂಗಳ ಮೊದಲ ವಾರದವರೆಗೆ ಒಟ್ಟು 90.3 ಮಿಮೀ ವಾಡಿಕೆ ಮಳೆ ಬೀಳಬೇಕಿದ್ದು 69.8 ಮಿ.ಮೀ. ಮಳೆಯಾಗಿದ್ದು 23ರಷ್ಟು ಕೊರತೆಯಾಗಿದ್ದು, ವಿವಿಧ ಬೆಳೆಗಳ ಬಿತ್ತನೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.



**ಸಕಲೇಶಪುರ:** ಭೂಮಾಪನ ಇಲಾಖೆಯ ಭೂಮಾಪಕ ನೌಕರ ಪುನೀತ್ ಎಚ್.ಆರ್. ಅವರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ವತಿಯಿಂದ ಉಪವಿಭಾಗಾಧಿಕಾರಿ, ತಹಶೀಲ್ದಾರ್ ಹಾಗೂ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಅವರಿಗೆ ಮನವಿ ಸಲ್ಲಿಸಲಾಯಿತು. ಸಂಘದ ಪದಾಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ನೌಕರರು ಪ್ರತಿಭಟನಾ ರೂಪದಲ್ಲಿ ಮನವಿ ಸಲ್ಲಿಸಿ, ಕರ್ತವ್ಯ ನಿರ್ವಹಿಸುತ್ತಿದ್ದ ಸರ್ಕಾರಿ ನೌಕರರ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ಮರುಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಿದರು.
ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಶಾಂತ, ಕಾರ್ಯದರ್ಶಿ ಜಗದೀಶ್ ಎನ್.ಎನ್., ಗೌರವಾಧ್ಯಕ್ಷ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ತಮ್ಮಣ್ಣಶೆಟ್ಟಿ ವೈ.ಎಸ್., ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪ್ರವೀಣ್ ಕುಮಾರ್ ಜೆ.ಜಿ., ಕಾರ್ಯದರ್ಶಿ ಸಲೀಂ, ಭೂಮಾಪನ ಇಲಾಖೆಯ ನಿರ್ದೇಶಕ ಗಣೇಶ್, ಎಡಿಎಲ್‌ಆರ್ ಕೀರ್ತಿಸಿಂಹ, ಎಸ್‌ಸಿ/ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಮಹೇಶ್ ಸೇರಿದಂತೆ ನೌಕರರ ಸಂಘದ ಪದಾಧಿಕಾರಿಗಳು, ಭೂಮಾಪನ ಇಲಾಖೆ ಸಿಬ್ಬಂದಿ ಹಾಗೂ ವಿವಿಧ ಇಲಾಖೆಗಳ ನೌಕರರು ಭಾಗವಹಿಸಿದ್ದರು.

# ಭಕ್ತರಲ್ಲಿ ಹರ್ಷ ಮೂಡಿಸಿದ ದುರ್ಗಾ ಹೋಮ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಗ್ರಾಮ ದೇವತೆ ದೊಡ್ಡಮ್ಮ ದೇವತೆ ನೂತನ ದೇವಾಲಯ ನಿರ್ಮಾಣದ 15 ನೇ ವಾರ್ಷಿಕೋತ್ಸವದ ಪ್ರಯುಕ್ತ ಮಂಗಳವಾರ ದುರ್ಗಾ ಹೋಮವನ್ನು ನಡೆಸಲಾಯಿತು.

ಬೆಳಿಗ್ಗೆ ದೇವಾಲಯದಲ್ಲಿ ದೇವರಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ನಡೆಸಿ ವಿವಿಧ ಪೂಜಾ ಕೈಂಕರ್ಯಗಳನ್ನು ನೇರವೇರಿಸಲಾಯಿತು. ಬಳಿಕ ದೇವಾಲಯದ ಆವರಣದಲ್ಲಿ ಮಹಾಗಣಪತಿ, ನವಗ್ರಹ ಹಾಗೂ ದುರ್ಗಾ ಹೋಮಗಳನ್ನು ನಡೆಸಿ ಪೂರ್ಣಾಹುತಿ ಸಲ್ಲಿಸಲಾಯಿತು. ಬಳಿಕ ಮಹಾಮಂಗಳಾರತಿ ಪ್ರಸಾದ ವಿನಿಯೋಗ ನಡೆಸಲಾಯಿತು. ಪುರೋಹಿತರಾದ ನಾಗೇಂದ್ರ, ಮತ್ತು ನರಸಿಂಹ ಮೂರ್ತಿ, ದೇವಾಲಯದ ಅರ್ಚಕ ಮಂಜುನಾಥ್ ಮತ್ತು ತಂಡದವರು ಪೂಜೆ



ಹಾಗೂ ಹೋಮ ಕಾರ್ಯಗಳನ್ನು ನೆರವೇರಿಸಿದರು.

ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ನೂತನ ದೇವಾಲಯದ ವಾರ್ಷಿಕೋತ್ಸವದ ಪ್ರಯುಕ್ತ ಪ್ರತಿ ವರ್ಷ ಲೋಕ ಕಲ್ಯಾಣಾರ್ಥವಾಗಿ ಚಂಡಿಕಾ ಹೋಮವನ್ನು ನಡೆಸಿಕೊಂಡು ಬರಲಾಗುತ್ತಿದೆ. ಮುಂದಿನ ವರ್ಷ ಜಾತ್ರೆ ಇರುವ ಪ್ರಯುಕ್ತ ಈ ಬಾರಿ ದುರ್ಗಾ ಹೋಮ ನಡೆಸಿ ಸರಳವಾಗಿ ಕಾರ್ಯಕ್ರಮ ಆಯೋಜಿಸಿ ಉತ್ತಮ, ಮಳೆ, ಬೆಳೆ ಹಾಗೂ ಸಮಾಜದ ಕ್ಷೇಮಕ್ಕಾಗಿ ಪ್ರಾರ್ಥನೆ ಸಲ್ಲಿಸಿದ್ದಾಗಿ ದೊಡ್ಡಮ್ಮ ಸೇವಾ ಸಮಿತಿ ಅಧ್ಯಕ್ಷ ಎ.ಎಸ್.ರಾಮಸ್ವಾಮಿ ಅವರು ಹೇಳಿದರು.

ಕಾರ್ಯದರ್ಶಿ ಶಶಿಕುಮಾರ್, ತಹಶೀಲ್ದಾರ್ ಕೆ.ಸಿ.ಸೌಮ್ಯ, ಪಿಎಸ್‌ಐ ಕವಿತಾ, ಮೈಲಾರಿ, ಎ.ಜಿ.ರಾಮನಾಥ್, ಸತ್ಯನಾರಾಯಣ ಇದ್ದರು.

## ಸಂವಿಧಾನ ಕುರಿತು ನಡೆದ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದವರಿಗೆ ಪುರಸ್ಕಾರ

# ಸ್ಪರ್ಧಾತ್ಮಕ ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ಹೆಚ್ಚು ಸಹಕಾರಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಯುವಜನತೆ ಮತ್ತು ವಿದ್ಯಾರ್ಥಿಗಳಲ್ಲಿ ಸಂವಿಧಾನದ ಬಗ್ಗೆ ಅರಿವು ಮತ್ತು ಅಧ್ಯಯನದ ಆಸಕ್ತಿ ಹೆಚ್ಚಿಸಲು ತಾಲ್ಲೂಕಿನಲ್ಲಿ ನಡೆಸಿದ ಸಂವಿಧಾನ ಸ್ಪರ್ಧಾತ್ಮಕ ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ಹೆಚ್ಚು ಸಹಕಾರಿಯಾಗಿವೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ತಿಳಿಸಿದರು.

ಕರ್ನಾಟಕ ದಲಿತ ಸಮನ್ವಯ ಸಮಿತಿ ಹಾಗೂ ಡಾ.ಸಿ.ಎನ್. ಬಾಲಕೃಷ್ಣ ಜನವಿಕಾಸ ಸಾಂಸ್ಕೃತಿಕ ವೇದಿಕೆ ವತಿಯಿಂದ ಇತ್ತೀಚೆಗೆ ಆಯೋಜಿಸಲಾಗಿದ್ದ 3ನೇ ವರ್ಷದ ಸಂವಿಧಾನ ಮತ್ತು ಸಾಮಾನ್ಯ ಜ್ಞಾನ ಕುರಿತು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಹುಮಾನ ನೀಡಿ ಅಭಿನಂದಿಸಿ ಮಾತನಾಡಿದ ಅವರು, ಭಾರತ ಸಂವಿಧಾನದ ಮೌಲ್ಯಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ಉದ್ದೇಶದಿಂದ, ಕರ್ನಾಟಕ ಸರ್ಕಾರವು ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು ಹಾಗೂ ಕಾಲೇಜುಗಳಲ್ಲಿ ಮತ್ತು ಸರ್ಕಾರಿ ಕಚೇರಿಗಳಲ್ಲಿ ಸಂವಿಧಾನದ ಪೀಠಿಕೆಯನ್ನು ಕಡ್ಡಾಯವಾಗಿ ಓದುವುದು ಮತ್ತು ಪ್ರದರ್ಶಿಸುವುದನ್ನು ಜಾರಿಗೆ ತಂದಿದೆ ಎಂದರು.

ಇಂದಿನ ವಿದ್ಯಾರ್ಥಿಗಳು ಸಂವಿಧಾನ ರಚನೆ, ಇತಿಹಾಸ, ಅದರ ಅಂಶಗಳು ಹಾಗೂ ನಾಗರಿಕರಿಗೆ ನೀಡಿರುವ ಹಕ್ಕುಗಳ ಬಗ್ಗೆ ಅರಿವು ಹೊಂದುವುದು ಬಹಳ ಮುಖ್ಯವಾಗಿದೆ. ಸಂವಿಧಾನದ ಪೀಠಿಕೆಯು ದೇಶದ ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ, ಗಣರಾಜ್ಯ ಅಂಶಗಳನ್ನು ತಿಳಿಪಡಿಸುತ್ತದೆ. ರಾಜ್ಯ ನಿರ್ದೇಶಕ ತತ್ವಗಳು ಸೇರಿ ದೇಶದ ನಾಗರಿಕನ ಮೂಲಭೂತ ಹಕ್ಕು, ಕರ್ತವ್ಯಗಳು ಸೇರಿ ಹಲವು ಅಂಶಗಳನ್ನು ಸಂವಿಧಾನ ತಿಳಿಪಡಿಸುತ್ತದೆ. ದೇಶದ ಸಂವಿಧಾನಕ್ಕೆ ತನ್ನದೆ ಆದಂತಹ ಇತಿಹಾಸ, ಮಹತ್ವ ಹಾಗೂ ಲಿಖಿತ ಸ್ವರೂಪವಿದೆ. ಜಗತ್ತಿನಲ್ಲಿಯೇ ಅತಿದೊಡ್ಡ ಲಿಖಿತ ಸಂವಿಧಾನ ನಮ್ಮದು ಎಂದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಂದ ರಚನೆಯಾಗಿರುವ ಸಂವಿಧಾನದಲ್ಲಿ, ಎಲ್ಲ ವರ್ಗಗಳ, ಎಲ್ಲ ಸ್ತರದ ಜನರ ಹಿತವಿದೆ. ಜೊತೆಗೆ ನಮ್ಮ ದೇಶದ ಪ್ರಜಾಪ್ರಭುತ್ವದ ಭದ್ರ ಬುನಾದಿಯೂ ನಮ್ಮ ಸಂವಿಧಾನ. ದೇಶದ ಪ್ರತಿಯೊಬ್ಬ ಪ್ರಜೆಯು ಇಡೀ ಸಂವಿಧಾನವನ್ನು ಅಧ್ಯಯನ ಮಾಡಬೇಕೆ ಹೊರತು ಅದರ ಪೀಠಿಕೆ ಓದುವಿಕೆಗಷ್ಟೇ ಸೀಮಿತವಾಗಬಾರದು ಎಂದರು.

ದಿಂಡಗೂರು ಗೋವಿಂದರಾಜು, ಕಸಾಪ ತಾಲೂಕು ಅಧ್ಯಕ್ಷ ಹಡೇನಹಳ್ಳಿ ಲೋಕೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮರಿ ದ್ಯಾವೇಗೌಡ, ಅಶೋಕ್, ಬಿ.ಎನ್.ಸ್ವಾಮಿ, ಸೈಯದ್ ಆಹಮದ್, ರಂಗಯ್ಯ, ಮಟ್ಟನವಿಲೆ ಮೋಹನ್ ಇತರರು ಇದ್ದರು.

# ಸಿಇಟಿ ಸೀಟು ಹಂಚಿಕೆ ಪ್ರಕ್ರಿಯೆ ಕುರಿತ ಅರಿವು ಅತ್ಯಗತ್ಯ

• ಪ್ರಜೋದಯ ವರದಿ

**ಹಾಸನ:** ಪರೀಕ್ಷೆಗಾಗಿ ವರ್ಷಗಟ್ಟಲೆ ಸಿದ್ಧತೆ ನಡೆಸುವ ವಿದ್ಯಾರ್ಥಿಗಳು, ಸಿಇಟಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಅರಿತುಕೊಳ್ಳಲು ವಿವೇಚನೆ ತೋರದೆ ಹೋದಲ್ಲಿ ತಮ್ಮ ರ್‍ಯಾಂಕಿಂಗ್‌ಗೆ ಅನುಗುಣವಾಗಿ ಉತ್ತಮ ಆಯ್ಕೆ ಮಾಡಿಕೊಳ್ಳುವಲ್ಲಿ ಎಡವುವ ಸಾಧ್ಯತೆ ಇದೆ ಎಂದು ಪ್ರಾಧ್ಯಾಪಕ ಡಾ. ನವೀನ್‌ಕುಮಾರ್ ಸಿ.ಎಂಅವರು ತಿಳಿಸಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ)ದ ಸಹಯೋಗದೊಂದಿಗೆ ಆಯೋಜಿಸಿರುವ 'ಯುಜಿಸಿಇಟಿ ಸೀಟು ಹಂಚಿಕೆ ಮಂಥನ' ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ಅವರು, ಮಾಹಿತಿ ಕೊರತೆ ಹಾಗೂ ಅಜಾಗರೂ

### ವಿವೇಚನೆ ತೋರದಿದ್ದರೆ ರ್‍ಯಾಂಕಿಂಗ್‌ಗೆ ಅನುಗುಣವಾಗಿ ಉತ್ತಮ ಆಯ್ಕೆ ಅಸಾಧ್ಯ

ಕತನದಿಂದ ಉತ್ತಮ ಆಯ್ಕೆ ಮಾಡಿಕೊಳ್ಳುವಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಹಾಗೂ ಪೋಷಕರು ಎಡವುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಸೀಟು ಆಯ್ಕೆ ವೇಳೆ ಕಾಲೇಜು ಕೋಡ್ ಮತ್ತು ಶುಲ್ಕವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಅನುದಾನಿತ ಹಾಗೂ ಅನುದಾನರಹಿತ ಎರಡೂ ವಿಧದ ಸೀಟುಗಳಿರುವ ಖಾಸಗಿ ಕಾಲೇಜುಗಳಲ್ಲಿ ಸೀಟು ಆರಿಸಿಕೊಳ್ಳುವಾಗ ಅನುದಾನಿತ ಸೀಟುಗಳಿಗೆ ಮೊದಲ ಆದ್ಯತೆ ನೀಡುವುದು ಜಾಣನಡೆ. ಅನುದಾನಿತ ಸೀಟುಗಳ ಶುಲ್ಕ ಕಡಿಮೆ ಇರಲಿದೆ. ಆಯ್ಕೆ ನಮೂದಿಸುವ ಸಂದರ್ಭದಲ್ಲಿ ಕಾಲೇಜು ಅಥವಾ ಕೋರ್ಸು ಆಧಾರದಲ್ಲಿ ಸರ್ಚ್



ಮಾಡಬಹುದು. ಈ ವೇಳೆ ಆಯಾ ಸೀಟಿಗೆ ನಿಗದಿಗೊಂಡಿರುವ ಶುಲ್ಕವೂ ಬಿತ್ತರಗೊಳ್ಳಲಿದೆ ಎಂದು ಹೇಳಿದರು.

ಈ ವರ್ಷದ ಸೀಟ್ ಮ್ಯಾಟ್ರಿಕ್ಸ್ ಮತ್ತು ಕಳೆದ ವರ್ಷದ ಕಟ್ ಆಫ್ ರ್‍ಯಾಂಕಿಂಗ್ ವಿವರಗಳನ್ನು ಪರಾಮರ್ಶಿಸಿದರೆ ನಿರ್ದಿಷ್ಟ ರ್‍ಯಾಂಕ್‌ಗೆ ಯಾವೆಲ್ಲ ಕಾಲೇಜುಗಳಲ್ಲಿ ಸೀಟು ಸಿಗಲಿದೆ ಎಂಬುದನ್ನು ಅಂದಾಜಿಸಬಹುದು. ಆಪ್ಷನ್ ಎಂಟ್ರಿ ವೇಳೆ ಹೆಚ್ಚು ಆಯ್ಕೆಗಳನ್ನು ನಮೂದಿಸುವುದು ಸೂಕ್ತ. ಕಡಿಮೆ ಆಯ್ಕೆಗಳನ್ನು ನಮೂದಿಸಿದರೆ ಅನಾನುಕೂಲಗಳು ಹೆಚ್ಚು. ಕಡಿಮೆ ಆದ್ಯತೆಯ ಸಿಗಬಹುದಾದ ಆಯ್ಕೆಯನ್ನು ಕೊನೆಗೆ ನಮೂದಿಸಿ, ಸಿಗುವ ಸಾಧ್ಯತೆ ಕಡಿಮೆ ಇರುವ ಆದರೆ ಸೇರಲು ಬಯಸುವ ಆಯ್ಕೆಗಳನ್ನು ಮೊದಲಿಗೆ ನಮೂದಿಸುವುದು ಸರಿಯಾದ ನಡೆ ಎಂದು ವಿವರಿಸಿದರು.

ವೃತ್ತಿಪರ ಕೋರ್ಸ್‌ಗಳ ಸೀಟು ಹಂಚಿಕೆ ಪ್ರಕ್ರಿಯೆ ಕುರಿತು ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಅರಿವು ಮೂಡಿಸುವ ಸಲುವಾಗಿ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ಕಾರ್ಯಾಗಾರ ಮೇ 30ರ ವರೆಗೆ ನಡೆಯಲಿದೆ. ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಮಾಹಿತಿ ಪಡೆಯಬಹುದಾಗಿದ್ದು, ಮೊಬೈಲ್ ಸಂಖ್ಯೆ 9141305843 ಸಂಪರ್ಕಿಸುವಂತೆ ಕೋರಲಾಗಿದೆ.

# ಮಾನವನ ಸೇವೆಯೇ ಮಹಾದೇವನ ಸೇವೆ

• ಪ್ರಜೋದಯ ವರದಿ

**ಆಲೂರು:** ಮಾನವನ ಸೇವೆ ಮಾಡುವುದು ಮಹಾದೇವನ ಸೇವೆ ಮಾಡಿದಂತೆ ಎಂದು ಶ್ರೀಮದ್ ರಂಭಾಪುರೀ ವೀರಾಸಿಂಹಾಸನ ಶಾಖಾ ಶ್ರೀ ಸಂಸ್ಥಾನ ಹಿರೇಮಠ ಕಾರ್ಜುವಳ್ಳಿಯ ಪೀಠಾಧ್ಯಕ್ಷರಾದ ಸದಾಶಿವ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಅಗಿಲೆ ಗ್ರಾಮದಲ್ಲಿರುವ ತೇಜೋದಯ ನಿರಾಶ್ರಿತರ ಆಶ್ರಮದಲ್ಲಿ ಮನೆ-ಮನೆಗೆ, ಮನ-ಮನಕೆ ರೇಣುಕ ಎಂಬ ಧರ್ಮ ಜಾಗೃತಿ ಹಾಗು ತತ್ವ ಪ್ರಚಾರ ಕಾರ್ಯಕ್ರಮ ಮೂರು ವರ್ಷ ಪೂರೈಸಿದ ಹಿನ್ನಲೆಯಲ್ಲಿ, ಸರಳ ಸಂಭ್ರಮಾಚರಣೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಸಮಾಜದಲ್ಲಿ ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಧರ್ಮ ಪ್ರಚಾರದ ಜೊತೆಗೆ ದೀನ ದಲಿತರ, ನಿರಾಶ್ರಿತರ ಹಾಗು ಅಗತ್ಯವಿರುವವರಿಗೆ ನೆರವಾಗುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಸಂಸ್ಥಾನ ಹಿರೇಮಠ ಹಾಗು ಸಿದ್ಧಾಂತ ಶಿಖಾಮಣಿ ತತ್ವ ಪ್ರಸಾರ ಅಭಿಯಾನ ಸಮಿತಿಯಿಂದ ನಡೆಯುತ್ತಿರುವ ಅಭಿಯಾನ 36 ಸಂಚಿಕೆ ಪೂರೈಸಿದೆ.



ಸಮಾಜದಲ್ಲಿ ಧಾರ್ಮಿಕ ಮೌಲ್ಯ, ಸನಾತನ ಸಂಸ್ಕೃತಿ, ವೀರಶೈವ ಸಿದ್ಧಾಂತ ಹಾಗು ಮಾನವೀಯತೆ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಸಮಾರಂಭದ ಅಂಗವಾಗಿ ಆಶ್ರಮದಲ್ಲಿರುವ ನಿರಾಶ್ರಿತರಿಗೆ ಹಾಗು ಅಗತ್ಯವಿರುವವರಿಗೆ ತರಕಾರಿ, ಅಕ್ಕಿ, ಬೇಳೆ, ಎಣ್ಣೆ ಸೇರಿ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಲಾಗಿದೆ ಎಂದರು.

ಗಿರಿತೇಜ್, ಡಿ.ಎ.ದೇವರಾಜ್ ಶಾಸ್ತ್ರೀ, ಹೊನ್ನಸ್ವಾಮಿ, ಮಂಜುನಾಥ ಶ್ರೀಧರ್, ವಿರೂಪಾಕ್ಷಯ್ಯ ಇದ್ದರು.

# ಇಂಧನ ದರ ಏರಿಕೆಯಿಂದ ಜನರಿಗೆ ಸಂಕಷ್ಟ

• ಪ್ರಜೋದಯ ವರದಿ

**ಹಾಸನ:** ಪೆಟ್ರೋಲ್- ಡೀಸೆಲ್ ದರ ಏರಿಕೆ ಮಾಡಿರುವುದರಿಂದ ಜನಸಾಮಾನ್ಯರಿಗೆ ಹೊರೆಯಾಗಿದ್ದು, ಕೂಡಲೇ ಕೇಂದ್ರ ಸರ್ಕಾರ ದರ ಏರಿಕೆ ವಾಪಾಸ್ ಪಡೆಯಬೇಕೆಂದು ಕಾಂಗ್ರೆಸ್ ಜಿಲ್ಲಾ ವಕ್ತಾರ ಮಂಜುನಾಥ್ ಶರ್ಮಾ ಅವರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಒಂದಲ್ಲ, ಎರಡಲ್ಲ ನಾಲ್ಕು ಬಾರಿ ಇಂಧನ ದರ ಏರಿಕೆ ಮಾಡಿರುವುದರಿಂದ ಬಡವರು, ಮಧ್ಯಮ ವರ್ಗದ ಜೀವನ ಕಷ್ಟಕ್ಕೆ ಸಿಲುಕಿದೆ. ಗ್ಯಾರಂಟಿ ಯೋಜನೆ ಇಲ್ಲದೇ ಇದ್ದಿದ್ದರೆ ಜೀವನ ಇನ್ನೂ ಸಂಕಷ್ಟಕ್ಕೆ ದೂಡುತ್ತಿತ್ತು ಎಂದು ಹೇಳಿದರು.

ಪ್ರಧಾನಿ ಅವರೇ ಮುಂದೆ ಅಚ್ಛೇ ದಿನಗಳು ಬರಲಿವೆ ಎಂದಿದ್ದರು. ಈಗ



ಅವರೇ ವಿದೇಶಿ ಪ್ರವಾಸ ಮುಂದೂಡಿ, ಚಿನ್ನ ಖರೀದಿ ಮಾಡಬೇಡಿ, ಮುಂದೆ ಸಂಕಷ್ಟದ ದಿನಗಳು ಕಾದಿವೆ ಎನ್ನುತ್ತಿದ್ದಾರೆ. ಇದೆಲ್ಲವುದಕ್ಕೂ ಪ್ರಧಾನಿಯೇ ಉತ್ತರ ನೀಡಬೇಕು. ಮೋದಿ ಅವರಿಂದ ದೇಶದಕ್ಕೆ ಅನುಕೂಲವಾಗಲಿದೆ ಎಂದು ಅನೇಕರು ಅಂದುಕೊಂಡಿದ್ದರು. ಆದರೆ ಎಲ್ಲವೂ ಈಗ ಹುಸಿಯಾಗಿದೆ. ಇದಕ್ಕೆ ಕಾಂಗ್ರೆಸ್ ಒಂದೇ ಅಲ್ಲ, ಎಲ್ಲಾ ವರ್ಗದ ಜನರೂ ಆಕ್ರೋಶಗೊಂಡಿದ್ದಾರೆ ಎಂದರು.

ಕಾಂಗ್ರೆಸ್ ಮುಖಂಡ ಸಲೀಂ ಕೊಲ್ಲಹಳ್ಳಿ ಅವರು ಮಾತನಾಡಿ, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ 22 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳ ಭವಿಷ್ಯ ಸಂಕಷ್ಟಕ್ಕೆ ಸಿಲುಕಿದೆ. ಪ್ರಶ್ನೆ ಪತ್ರಿಕೆ ಸೋರಿಕೆಗೆ ಭದ್ರತೆ ಇಲ್ಲದಿರುವುದೇ ಪ್ರಮುಖ ಕಾರಣ. ಪರೀಕ್ಷೆಗೆ 48 ಗಂಟೆ ಮುಂಚೆ ಪ್ರಶ್ನೆ ಪತ್ರಿಕೆ ಸೋರಿಕೆಯಾದರೂ, ಇದು ಸರ್ಕಾರಕ್ಕೆ ತಿಳಿಯಲಿಲ್ಲ, ಗೊತ್ತಾಗಲಿಲ್ಲ ಎಂಬುದು ದುರ್ದೈವದ ಸಂಗತಿ. ಹೀಗಾದರೆ ದೇಶದ ಭದ್ರತೆ ಪ್ರಶ್ನೆ ಏನು, ಉತ್ತರ ಭಾರತದ ವಿದ್ಯಾರ್ಥಿಗಳಿಗೆ ಮೆಡಿಕಲ್, ಇಂಜಿನೀಯರ್ ಕೋರ್ಸ್‌ಗೆ ಅವಕಾಶ ಮಾಡಿಕೊಡಬೇಕೆಂದು ಹೀಗೆ ಹಗರಣ ಮಾಡಲಾಗುತ್ತಿದೆ ಎಂದು ಅವರು ದೂರಿದರು.

# ಸಕಲೇಶಪುರ ಡಾಲರ್ಸ್ ಕಾಲೋನಿಯಲ್ಲಿ ತಾತ್ಕಾಲಿಕ ಶೆಡ್‌ಗಳ ತೆರವು

• ಪ್ರಜೋದಯ ವರದಿ


**ಸಕಲೇಶಪುರ:** ಪಟ್ಟಣದ ಬಸವನಹಳ್ಳಿ ಗ್ರಾಮದ ಡಾಲರ್ಸ್ ಕಾಲೋನಿಯ ಖಾಸಗಿ ಲೇಔಟ್ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ತಾತ್ಕಾಲಿಕ ಶೆಡ್‌ಗಳನ್ನು ಪೊಲೀಸರು ತೆರವುಗೊಳಿಸಿದ ಪರಿಣಾಮ, ಕಳೆದ ಹದಿನೈದು ದಿನಗಳಿಂದ ಅಲ್ಲೇ ಆಶ್ರಯ ಪಡೆದಿದ್ದ ಇಪ್ಪತ್ತಕ್ಕೂ ಹೆಚ್ಚು ಕುಟುಂಬಗಳು ನೆಲೆ ಕಳೆದುಕೊಂಡಿರುವ ಘಟನೆ ನಡೆದಿದೆ.

ಸಂತ್ರಸ್ತರ ಹೇಳಿಕೆಯ ಪ್ರಕಾರ, ಸಂಬಂಧಿತ ಜಾಗವು ಗ್ರಾಮ ನಕ್ಷೆಯಲ್ಲಿ ಹರಿಜನ ಕೇರಿ ಎಂದು ನಮೂದಾಗಿರುವ ಹಿನ್ನೆಲೆಯಲ್ಲಿ ತಾವು ಅಲ್ಲಿ ತಾತ್ಕಾಲಿಕವಾಗಿ ಆಶ್ರಯ ಪಡೆದಿದ್ದೇವೆ ಎಂದು ತಿಳಿಸಿದ್ದಾರೆ. ಆದರೆ ಜಾಗದ ಮಾಲೀಕರು ಇದು

### ಟಾರ್ಪಾಲ್‌ಗೆ ಬೆಂಕಿ ಹಚ್ಚಿದ ಆರೋಪ | ರಾತ್ರಿ ವೇಳೆ ಉದ್ವಿಗ್ನ ಪರಿಸ್ಥಿತಿ

ಖಾಸಗಿ ಲೇಔಟ್ ಆಗಿದ್ದು, ಬಡ ಕುಟುಂಬಗಳು ಅತಿಕ್ರಮಣ ಮಾಡಿಕೊಂಡಿವೆ ಎಂದು ಪೊಲೀಸರಿಗೆ ದೂರು ನೀಡಿದ್ದರು. ದೂರಿನ ಅನ್ವಯ ಸ್ಥಳಕ್ಕೆ ಆಗಮಿಸಿದ ಪೊಲೀಸರು ಶೆಡ್‌ಗಳನ್ನು ತೆರವುಗೊಳಿಸಿ ಸ್ಥಳವನ್ನು ಖಾಲಿ ಮಾಡಿಸಿದ್ದಾರೆ.

ಈ ಕ್ರಮದ ಬೆನ್ನಲ್ಲೇ ತಡರಾತ್ರಿ ಬೆಂಗಳೂರಿನಿಂದ ಬಂದಿದ್ದಾರೆ ಎನ್ನಲಾದ ಆರು ಮಂದಿ ಅಪರಿಚಿತರು ಸ್ಥಳಕ್ಕೆ ಧಾವಿಸಿ, ಲಾಂಗ್ ಹಾಗೂ ಬೇಸ್‌ಬಾಲ್ ಸ್ಟಿಕ್‌ಗಳನ್ನು ಹಿಡಿದು ಜಾಗ ಖಾಲಿ ಮಾಡುವಂತೆ ನಿರಾಶ್ರಿತರಿಗೆ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದ್ದು, ಬಡ ಕುಟುಂಬಗಳು



ಹಾಕಿಕೊಂಡಿದ್ದ ಟಾರ್ಪಾಲ್‌ಗಳಿಗೆ ಬೆಂಕಿ ಹಚ್ಚಿ ದೌರ್ಜನ್ಯ ಎಸಗಿರುವುದಾಗಿ ದೂರಲಾಗಿದೆ.

ಘಟನೆಯ ವೇಳೆ ಸ್ಥಳೀಯ ಮಹಿಳೆಯರು ಹಾಗೂ ಅಪರಿಚಿತರ ನಡುವೆ ತೀವ್ರ ವಾಗ್ವಾದ ಮತ್ತು ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಸ್ಥಳೀಯರು ಮಧ್ಯ ಪ್ರವೇಶಿಸಿದ ಬಳಿಕ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ ಎಂದು ತಿಳಿದು ಬಂದಿದೆ.

ಇದೇ ವೇಳೆ, ಲೇಔಟ್ ಮಾಲೀಕರ ಕ್ರಮಕ್ಕೆ ಸ್ಥಳೀಯ ಶಾಸಕ ಸಿಮೆಂಟ್ ಮಂಜು, ಕಾಂಗ್ರೆಸ್ ಮುಖಂಡ ಮುರುಳಿ ಮೋಹನ್ ಹಾಗೂ ಪುರಸಭೆಯ ಮಾಜಿ ಸದಸ್ಯ ಮುಖೇಶ್ ಶೆಟ್ಟಿ ಅವರ ಕುಮ್ಮಕ್ಕಿದೆ ಎಂದು ಸಂತ್ರಸ್ತರು ಗಂಭೀರ ಆರೋಪ ಮಾಡಿದ್ದಾರೆ. ಆದರೆ, ಈ ಆರೋಪಗಳಿಗೆ ಸಂಬಂಧಪಟ್ಟವರಿಂದ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಪ್ರಸ್ತುತ ಮಹಿಳೆಯರು, ಮಕ್ಕಳು ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಕುಟುಂಬಗಳು ಕುಡಿಯುವ ನೀರು ಹಾಗೂ ಸೂರಿಲ್ಲದೆ ಸಂಕಷ್ಟದ ಪರಿಸ್ಥಿತಿಯಲ್ಲಿ ಕಾಲ ಕಳೆಯುತ್ತಿದ್ದು, ಜಿಲ್ಲಾಡಳಿತ ತಕ್ಷಣ ಮಧ್ಯಪ್ರವೇಶಿಸಿ ತಮಗೆ ಸೂಕ್ತ ಆಶ್ರಯ ಹಾಗೂ ನ್ಯಾಯ ಒದಗಿಸಿಕೊಡಬೇಕು ಎಂದು ಮನವಿ ಮಾಡಿಕೊಂಡಿವೆ.

ಘಟನೆ ಸಂಬಂಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ ಎನ್ನಲಾಗಿದೆ.

## ಪ್ರತಿಭಾ ಪುರಸ್ಕಾರದಲ್ಲಿ ಷಡ್ಡಾವರಹಿತೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ

# ಶಿಕ್ಷಣ ಕೇವಲ ಉದ್ಯೋಗಕ್ಕಲ್ಲ, ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ

• ಪ್ರಜೋದಯ ವರದಿ

**ಸಕಲೇಶಪುರ:** ಶಿಕ್ಷಣ ಎಂಬುದು ಕೇವಲ ಉದ್ಯೋಗ ಪಡೆಯಲು ಅಥವಾ ಹಣ ಸಂಪಾದನೆಗಾಗಿ ಮಾತ್ರ ಸೀಮಿತವಾಗಬಾರದು. ವ್ಯಕ್ತಿಯ ಜೀವನಕ್ಕೆ ದಿಕ್ಕು ತೋರಿಸಿ, ಸಂಸ್ಕಾರ, ಮಾನವೀಯತೆ, ಶಿಸ್ತು ಹಾಗೂ ಸಮಾಜದ ಜವಾಬ್ದಾರಿಯನ್ನು ಅರಿವು ಮಾಡಿಸುವುದೇ ನಿಜವಾದ ಶಿಕ್ಷಣದ ಉದ್ದೇಶ ಎಂದು ಹೆಗ್ಗಡಹಳ್ಳಿ ಶ್ರೀಮಠದ ಶ್ರೀ ಷ ಬ್ರ ಪ॥ ಷಡ್ಡಾವರಹಿತೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇಕಡಾ 90ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು ಹಾಗೂ ಎಸ್‌ಎಸ್‌ಎಲ್‌ಸಿ ಕನ್ನಡ ಐಚ್ಛಿಕ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಗೌರವಿಸುವ ಉದ್ದೇಶದಿಂದ 'ವೈಚಾರಿಕ ಸಂಜೆ' ದಿನಪತ್ರಿಕೆ ವತಿಯಿಂದ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ದಿವ್ಯ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಉದ್ಯೋಗ ಜೀವನಕ್ಕೆ ಅಗತ್ಯವಾದರೂ, ಶಿಕ್ಷಣದ ಮೌಲ್ಯ ಅದಕ್ಕಿಂತ ಬಹಳ ದೊಡ್ಡದು. ಶಿಕ್ಷಣದಿಂದ ಜ್ಞಾನ, ಆತ್ಮವಿಶ್ವಾಸ ಹಾಗೂ ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಬೆಳೆಯುತ್ತದೆ. ಶಿಕ್ಷಣ ಪಡೆದ ವ್ಯಕ್ತಿ ತನ್ನ ಕುಟುಂಬಕ್ಕೂ ಸಮಾಜಕ್ಕೂ ಮಾದರಿಯಾಗುತ್ತಾನೆ. ಆದ್ದರಿಂದ ವಿದ್ಯಾರ್ಥಿಗಳು ಶಿಕ್ಷಣವನ್ನು ಕೇವಲ ದುಡಿಮೆಗೆ ಸೀಮಿತಗೊಳಿಸದೇ ಉತ್ತಮ ವ್ಯಕ್ತಿತ್ವ ಮತ್ತು ಉತ್ತಮ ಸಮಾಜ ನಿರ್ಮಾಣಕ್ಕಾಗಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ವಿದ್ಯಾರ್ಥಿ ಜೀವನದಲ್ಲಿ ಬದ್ಧತೆ, ಸ್ಪಷ್ಟತೆ, ಏಕಾಗ್ರತೆ ಹಾಗೂ ಶಿಸ್ತು




ಮುಖ್ಯವೆಂದು ತಿಳಿಸಿದ ಅವರು, ನಮ್ಮ ಜೀವನದಲ್ಲಿ ಯಶಸ್ಸು ಸಾಧಿಸಲು ಐದು ಸೂತ್ರಗಳು ಅಗತ್ಯ. ಮೊದಲನೆಯದು ಬದ್ಧತೆ. ನಾವು ಏನಾಗಬೇಕು ಎಂಬುದರ ಬಗ್ಗೆ ಸ್ಪಷ್ಟ ಗುರಿ ಇರಬೇಕು. ಎರಡನೆಯದು ಗೊಂದಲದಿಂದ ದೂರ ಇರಬೇಕು. ಸುತ್ತಮುತ್ತಲಿನ ಒತ್ತಡಗಳಿಗೆ ಒಳಗಾಗದೆ ಗುರುಗಳ ಮಾರ್ಗದರ್ಶನದಲ್ಲಿ ಆತ್ಮವಿಶ್ವಾಸದಿಂದ ಪರೀಕ್ಷೆಗಳನ್ನು ಎದುರಿಸಬೇಕು. ಮೂರನೆಯದು ಏಕಾಗ್ರತೆ. ಇಂದಿನ ಆಧುನಿಕ ಜೀವನಶೈಲಿ ವಿದ್ಯಾರ್ಥಿಗಳ ಗಮನವನ್ನು ಬೇರೆಡೆ ಸೆಳೆಯುತ್ತಿದೆ. ಆದ್ದರಿಂದ ಓದಿನತ್ತ ಸಂಪೂರ್ಣ ಮನಸ್ಸು ಕೇಂದ್ರೀಕರಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ್ರತಿಭಾ ಮಂಜುನಾಥ್ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ವೈಚಾರಿಕ ಸಂಜೆ ದಿನಪತ್ರಿಕೆ ಕೈಗೊಂಡಿರುವುದು ಶ್ಲಾಘನೀಯ. ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನದೇ ಆದ ಪ್ರತಿಭೆ ಇರುತ್ತದೆ. ವಿದ್ಯಾರ್ಥಿಗಳು ತಮ್ಮ ತಂದೆ-ತಾಯಿಗಳ ಕಷ್ಟವನ್ನು ಅರಿತು ಶ್ರಮಪಟ್ಟು ಓದಿ ಅವರ ಕನಸು ನನಸು ಮಾಡಬೇಕು ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಂಚಾಲ ಕುಮಾರಸ್ವಾಮಿ ಅವರು ಮಾತನಾಡಿ, ಈ ರೀತಿಯ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸಾಧನೆಯನ್ನು ಗುರುತಿಸಿ ಮತ್ತಷ್ಟು ಸಾಧನೆಗೆ ಪ್ರೇರಣೆ ನೀಡುತ್ತವೆ ಎಂದು ಅಭಿಪ್ರಾಯಿಸಿದರು.

ವೈಚಾರಿಕ ಸಂಜೆ ದಿನಪತ್ರಿಕೆಯ ಸಂಪಾದಕ ಬ್ಯಾಕರವಳ್ಳಿ ವೆಂಕಟೇಶ್, ಕಟ್ಟೆಗದ್ದೆ ನಾಗರಾಜ್, ಹೆತ್ತೂರು ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷೆ ನೇತ್ರ ಸುರೇಶ್, ಹೆತ್ತೂರು, ಯಸಳೂರು ಕೃಷಿ ಇಲಾಖೆಯ ಅಧಿಕಾರಿ ಕೇಶವಮೂರ್ತಿ, ಸಾಹಿತಿ ಸುಹಾಸ್‌ಗೌಡ, ಕಿತ್ತೂರು ಕಸಾಪ ಅಧ್ಯಕ್ಷ ರವಿಕುಮಾರ್, ಕರವೇ ತಾಲೂಕು ಘಟಕದ ಅಧ್ಯಕ್ಷ ಗಗನ್ ಹಾಡ್ಲಹಳ್ಳಿ ಇನ್ನಿತರರು ಇದ್ದರು.

# ರಾಜ್ಯ ಸರ್ಕಾರದ 'ದ್ವೇಷ ಭಾಷಣ' ಮಸೂದೆಗೆ ತಡೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ದ್ವೇಷ ಭಾಷಣವನ್ನು ನಿಗ್ರಹಿಸುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳು (ತಡೆಗಟ್ಟುವಿಕೆ) ಮಸೂದೆ, 2025 ಅನ್ನು ಕೇಂದ್ರ ಗೃಹ ಸಚಿವಾಲಯ ತಡೆಹಿಡಿದಿದೆ.

ರಾಜ್ಯ ಸರ್ಕಾರ ಈಗಾಗಲೇ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಿ ಅನುಮೋದನೆಗಾಗಿ ರಾಜ್ಯಪಾಲರಿಗೆ ಕಳುಹಿಸಿತ್ತು. ಆದರೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಇದಕ್ಕೆ ಇನ್ನೂ ಸಹಿ ಹಾಕಿಲ್ಲ.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಅನುಮೋದನೆ ನೀಡಲು ನಿರಾಕರಿಸಿದ ನಂತರ, ಕರ್ನಾಟಕ ಸರ್ಕಾರವು ಫೆಬ್ರವರಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಒಪ್ಪಿಗೆಗಾಗಿ ಮಸೂದೆಯನ್ನು ಗೃಹ ಸಚಿವಾಲಯಕ್ಕೆ ಕಳುಹಿಸಿತ್ತು.

ಇದೀಗ ರಾಜ್ಯ ಸರ್ಕಾರದ 'ದ್ವೇಷ ಭಾಷಣ' ಮಸೂದೆಗೆ ಕೇಂದ್ರ ಸರ್ಕಾರ ಅಡ್ಡಗಾಲು ಹಾಕಿದ್ದು, ಈ ಹಂತದಲ್ಲಿ ಮಸೂದೆ ಅಗತ್ಯವಿಲ್ಲ ಮತ್ತು ಅಸ್ತಿತ್ವದಲ್ಲಿರುವ ಕಾನೂನು ಚೌಕಟ್ಟು ಈ ಸಮಸ್ಯೆಯನ್ನು

### ಅಸ್ತಿತ್ವದಲ್ಲಿರುವ ಕಾನೂನೇ ಸಾಕು: ಕೇಂದ್ರ



ಪರಿಹರಿಸಲು ಸಮರ್ಪಕವಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

ಈ ಸಂಬಂಧ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವ ಕೇಂದ್ರ ಗೃಹ ಸಚಿವಾಲಯ, ಇಂಥದ್ದೊಂದು ಮಸೂದೆಯ ಅಗತ್ಯ ಇದೆಯೇ? ಎಂದು ಪ್ರಶ್ನಿಸಿದೆ.

ಬಿಜೆಪಿ ಮತ್ತು ಜೆಡಿ(ಎಸ್)ನ ತೀವ್ರ ವಿರೋಧದ ಹೊರತಾಗಿಯೂ, ಕಳೆದ ವರ್ಷ ಡಿಸೆಂಬರ್ 19 ರಂದು ಮುಕ್ತಾಯಗೊಂಡ ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ರಾಜ್ಯ ವಿಧಾನಮಂಡಲದ ಎರಡೂ ಸದನಗಳು ಈ ಮಸೂದೆಯನ್ನು ಅಂಗೀಕರಿಸಲಾಗಿದೆ.

ಈ ವಿಷಯವನ್ನು ಸಿಎಸ್ ವಿಭಾಗದಲ್ಲಿ ಪರಿಶೀಲಿಸಲಾಗಿದೆ. ಈ ನಿಟ್ಟಿನಲ್ಲಿ, ಪರಿಹರಿಸಬೇಕಾದ ಸಮಸ್ಯೆಗಳು ಈಗಾಗಲೇ ಭಾರತೀಯ ನ್ಯಾಯ ಸಂಹಿತಾ, 2023 ಮತ್ತು ಇತರ ಚಾಲ್ತಿಯಲ್ಲಿರುವ ಕಾನೂನುಗಳ ಅಡಿಯಲ್ಲಿ ಗಣನೀಯವಾಗಿ ಸೇರಿ ಕೊಂಡಿವೆ. ಹೀಗಿರುವಾಗ ರಾಜ್ಯ ಸರ್ಕಾರವು ಪ್ರತ್ಯೇಕ ಕಾನೂನು ಜಾರಿಗೆ ತರುವುದರಿಂದ ನಕಲು ಮತ್ತು ಏಕರೂಪತೆಯ ಕೊರತೆ ಉಂಟಾಗಬಹುದು ಎಂದು ಗೃಹ ಸಚಿವಾಲಯ (ಸಿಎಸ್ ವಿಭಾಗ) ಪತ್ರದಲ್ಲಿ ತಿಳಿಸಿದೆ.

ಮೇಲಿನದನ್ನು ಗಮನದಲ್ಲಿಟ್ಟುಕೊಂಡು, ಈ ಹಂತದಲ್ಲಿ ಪ್ರಸ್ತಾವಿತ ಮಸೂದೆಯ ಅಗತ್ಯವಿಲ್ಲದಿರಬಹುದು ಮತ್ತು ಅಸ್ತಿತ್ವದಲ್ಲಿರುವ ಕಾನೂನು ಚೌಕಟ್ಟು ಸಮಸ್ಯೆಗಳನ್ನು ಪರಿಹರಿಸಲು ಸಾಕಾಗುತ್ತದೆ ಎಂದು ಕೇಂದ್ರ ಹೇಳಿದೆ. ಕರ್ನಾಟಕ ಸಂಸದೀಯ ವ್ಯವಹಾರ ಗಳು ಮತ್ತು ಶಾಸನ ಇಲಾಖೆಯ ಕಾರ್ಯದರ್ಶಿಗೆ ಮೇ 20 ರಂದು ಪತ್ರ ಬರೆದಿರುವ ಕೇಂದ್ರ ಗೃಹ ಸಚಿವಾಲಯದ ಕಾನೂನು ವಿಭಾಗ, ಈ ಮಸೂದೆಯ ಕುರಿತು ಮುಂದಿನ ಕ್ರಮ ಕೈಗೊಳ್ಳಲು ಸ್ಪಷ್ಟೀಕರಣ ನೀಡುವಂತೆ ಸೂಚಿಸಿದೆ.

# ಹೆತ್ತೂರು ಕಾಫಿ ಬ್ರ್ಯಾಂಡ್ ರಾಷ್ಟ್ರ ಮಟ್ಟದಲ್ಲಿ ಬೆಳೆಯಲಿ

## ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಸಿ.ಸಂದೇಶ್ ಆಶಯ | ವೆಸ್ಟರ್ನ್‌ಘಾಟ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿಗೆ ಚಾಲನೆ

• ಪ್ರಜೋದಯ ವರದಿ

**ಹೆತ್ತೂರು:** ಬೆಳೆಗಾರರು ತಮ್ಮದೇಯಾದ ಉತ್ತಮ ಕಾಫಿ ಬ್ರಾಂಡ್ ಸ್ಥಾಪಿಸಿಕೊಂಡು, ಆದಾಯ ಹೆಚ್ಚಿಸಿಕೊಳ್ಳುವ ಕೆಲಸವಾಗಬೇಕು. ಹೆತ್ತೂರು ಹೆಸರಿನ ಕಾಫಿ ಬ್ರಾಂಡ್ ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಲಿ ಎಂದು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಸಿ.ಸಂದೇಶ್ ಅವರು ಆಶಯ ವ್ಯಕ್ತಪಡಿಸಿದರು.



ಹೆತ್ತೂರು ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಹೆತ್ತೂರು ವೆಸ್ಟರ್ನ್ ಘಾಟ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ನಮ್ಮೆಲ್ಲರ ಕನಸಿನ ಕಂಪನಿಗೆ ಚಾಲನೆ ನೀಡಿದ್ದೇವೆ. ಮಗು ಹುಟ್ಟಿದ ನಂತರ ಅದರ ಬೆಳವಣಿಗೆಯನ್ನು ಹೇಗೆ ಕಾಳಜಿಯಿಂದ ಗಮನಿಸುತ್ತೇವೋ, ಅದೇ ರೀತಿಯಲ್ಲಿ ಸಂಸ್ಥೆಯ ಬೆಳವಣಿಗೆಯ ಮೇಲೂ ಎಲ್ಲರೂ ಜವಾಬ್ದಾರಿಯುತ ಮನೋಭಾವದಿಂದ ಗಮನ ಹರಿಸಬೇಕೆಂದು ಹೇಳಿದರು.

ಶ್ರಮ, ನಂಬಿಕೆ, ಸಾಮರಸ್ಯ ಹಾಗು ಪಾರದರ್ಶಕತೆಯೇ ಸಂಸ್ಥೆಯ ಯಶಸ್ಸಿನ ಮೂಲ ಆಧಾರಗಳಾಗಿವೆ. ಕಂಪನಿ ಸ್ಥಾಪನೆಯಾದ ಬಳಿಕ ಷೇರುದಾರರೊಂದಿಗೆ ಉತ್ತಮ ಬಾಂಧವ್ಯ ಹಾಗು ಸಮನ್ವಯತೆ ಕಾಪಾಡಿಕೊಳ್ಳಬೇಕು. ಹಣಕಾಸು ವ್ಯವಹಾರಗಳಲ್ಲಿ ಸಂಪೂರ್ಣ ಪಾರದರ್ಶಕತೆ ಇರಬೇಕು. ನಿರ್ದೇಶಕರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಗಬೇಕು. ಹಣ ಬಂದ ನಂತರ ಯಾರೂ ಬದಲಾಗದೆ, ಪರಸ್ಪರ ನಂಬಿಕೆ ಮತ್ತು ಸೌಹಾರ್ದತೆಯಿಂದ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕೆಂದು ಸಲಹೆ ನೀಡಿದರು.

ಕಂಪನಿ ಸ್ಥಾಪನೆಯ ಪ್ರಮುಖ ಉದ್ದೇಶ ರೈತರು ತಮ್ಮ ಬೆಳೆಗಳಿಗೆ ತಾವೇ ಬೆಲೆ ನಿಗದಿ ಪಡಿಸಿಕೊಳ್ಳುವ ಸಾಮರ್ಥ್ಯ ಹೊಂದುವುದು. ಇದರಿಂದ ಮಧ್ಯವರ್ತಿಗಳ ಹಾವಳಿ ಕಡಿಮೆಯಾಗುತ್ತದೆ. ರೋಸ್ಟಿಂಗ್ ಸೇರಿ ವಿವಿಧ ಪ್ರಕ್ರಿಯೆಗಳಿಗೆ ಸರ್ಕಾರದ ಸಬ್ಸಿಡಿ ಸಿಗುವ ಅವಕಾಶಗಳಿವೆ. ಕಾಫಿ ಸೇವನೆಯ ಉಪಯೋಗಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ನಮ್ಮ ಕಾಫಿ ಬ್ರಾಂಡ್‌ನ್ನು ನಾವೇ ಹೆಚ್ಚು ಉಪಯೋಗಿಸಬೇಕು. ಮೊದಲು ನಮ್ಮ ಮೇಲೆಯೇ ನಮಗೆ ನಂಬಿಕೆ ಇರಬೇಕು. ನಿರ್ದೇಶಕರು ಸಮಯ ಪ್ರಜ್ಞೆ ಹಾಗು ಶಿಸ್ತಿಗೆ ಹೆಚ್ಚಿನ ಮಹತ್ವ ನೀಡಬೇಕು. ಸಂಸ್ಥೆಯ ಸಬಲೀಕರಣ ಹಾಗು ರೈತಪರ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕೆಂದು ತಿಳಿಸಿದರು.

ಭಾರತೀಯ ಕಾಫಿ ಮಂಡಳಿಯ ಕಾರ್ಯದರ್ಶಿ ಡಾ.ಕುಮಾರ್‌ರಾವ್ ಅವರು ಮಾತನಾಡಿ, ವೆಸ್ಟರ್ನ್ ಘಾಟ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ ಪಶ್ಚಿಮಘಟ್ಟ ಪ್ರದೇಶದ ರೈತರ ಅಭಿವೃದ್ಧಿಗಾಗಿ ಸ್ಥಾಪನೆಯಾದ ಮಹತ್ವದ ರೈತ ಉತ್ಪಾದಕ ಸಂಸ್ಥೆಯಾಗಿದೆ. ರೈತರಿಗೆ ಉತ್ತಮ ಮಾರುಕಟ್ಟೆ, ನ್ಯಾಯಯುತ ಬೆಲೆ, ತಾಂತ್ರಿಕ ಮಾರ್ಗ ದರ್ಶನ ಹಾಗು ಆರ್ಥಿಕ ಬಲ ನೀಡುವ ಉದ್ದೇಶ ದಿಂದ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆಂದರು.

ಜಾಗತಿಕ ಮಟ್ಟದಲ್ಲಿ ಭಾರತೀಯ ಕಾಫಿಗೆ ಉತ್ತಮ ಬೆಲೆ ಸಿಗುವಂತೆ ಕಾಫಿ ಮಂಡಳಿ ಕಾರ್ಯನಿರ್ವಹಿಸುತ್ತಿದೆ. ರೈತರು ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ಗುಣಮಟ್ಟದ ಉತ್ಪಾದನೆಗೆ ಒತ್ತು ನೀಡಬೇಕು. ರೈತರು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಉತ್ಪಾದನೆ, ಮಾರುಕಟ್ಟೆ ಹಾಗೂ ರಫ್ತು ಕ್ಷೇತ್ರಗಳಲ್ಲಿ ಹೆಚ್ಚಿನ ಸಾಧನೆ ಸಾಧ್ಯ. ಹೆತ್ತೂರಿನಲ್ಲಿ ಉತ್ತಮ ನಾಯಕತ್ವವಿರುವುದರಿಂದ ಈ ಸಂಸ್ಥೆ ಯಶಸ್ವಿಯಾಗಿ ಬೆಳೆಯಲಿದೆಂದುವಿಶ್ವಾಸ ವ್ಯಕ್ತಪಡಿಸಿದರು.

ಉದ್ಯಮಿ ಜಾಗಟೆ ಶಿವಕುಮಾರ್ ಅವರು ಮಾತನಾಡಿ, ಮಲೆನಾಡು ಪ್ರದೇಶವು ನೆಮ್ಮದಿ ಹಾಗು ಸುಂದರ ಬದುಕಿಗೆ ಹೆಸರಾಗಿದ್ದು, ಇಲ್ಲಿನ ಜನರು ಸರಳ ಹಾಗು ಸುಖಿಸಂಪನ್ನ ಜೀವನ ನಡೆಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಜೀವನ ಶೈಲಿಯಲ್ಲಿ ಬದಲಾವಣೆಗಳಾಗುತ್ತಿದ್ದು, ಕಾಲಾನು ಗುಣವಾಗಿ ಇನ್ನಷ್ಟು ಸಂಘ-ಸಂಸ್ಥೆಗಳು ಹುಟ್ಟಬರಬೇಕಾದ ಅಗತ್ಯವಿದೆ. ವಿದೇಶಗಳಲ್ಲಿ ಇಂತಹ ಸಂಸ್ಥೆಗಳು ಬಹಳ ಹಿಂದಿನಿಂದಲೇ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಇದೀಗ ಹೆತ್ತೂರಿನಲ್ಲಿಯೂ ಇಂತಹ ಸಂಸ್ಥೆ ಆರಂಭವಾಗಿರುವುದು ಸಂತಸದ ವಿಚಾರ ಎಂದರು.

ಸತ್ಯನಾರಾಯಣ ಅವರು ಆಂಧ್ರಪ್ರದೇಶದಲ್ಲಿ ತಮ್ಮ ಎಫ್‌ಪಿಒ ಕಂಪನಿಯನ್ನು ಯಶಸ್ವಿಯಾಗಿ ಕಟ್ಟಿದ ಅನುಭವವನ್ನು ಹಂಚಿಕೊಂಡರು. ಸಂಸ್ಥೆಯ ಅಧ್ಯಕ್ಷತೆಯನ್ನು ಹೆಚ್.ಟಿ.ಸುಧಾಕರ್ ವಹಿಸಿದ್ದರು. ಭಾರತೀಯ ಕಾಫಿ ಮಂಡಳಿ ಸಲಹೆಗಾರ ಡಾ. ನವೀನ್, ಹೆಚ್‌ಡಿಪಿಎಉಪಾಧ್ಯಕ್ಷ ಸಚಿನ್, ನಿರ್ದೇಶಕರಾದ ನಾಗಭೂಷಣ, ಮುರಳಿ, ರವಿಕುಮಾರ್, ಕವನ್, ಕಾಫಿ ಬೆಳೆಗಾರರು ಭಾಗವಹಿಸಿದ್ದರು.

### ಉತ್ಪಾದಕ ಸಂಸ್ಥೆಗಳಿಂದ ರೈತರ ಬಲವರ್ಧನೆ

ಕಾಫಿ ಬೆಳೆಗಾರರು ಕೇವಲ ಒಂದು ಬೆಳೆಗೆ ಸೀಮಿತವಾಗದೆ ಪರ್ಯಾಯ ಬೆಳೆಗಳತ್ತವೂ ಗಮನ ಹರಿಸಬೇಕು. ರೈತ ಉತ್ಪಾದಕ ಸಂಸ್ಥೆಗಳು ರೈತರ ಆರ್ಥಿಕ ಬಲವರ್ಧನೆಗೆ ಅತ್ಯಂತ ಅಗತ್ಯ. ರೈತರು ಹೊಸ ಚಿಂತನೆ ಅಳವಡಿಸಿಕೊಂಡು ಕಾರ್ಪೊರೇಟ್ ಮಾದರಿಯಲ್ಲಿ ಬೆಳೆಯಬೇಕು. ಏಲಕ್ಕಿಗೆ ಕಟ್ಟೆ ರೋಗ ಬಂದು ಇಳುವರಿ ಕುಸಿದಿರುವುದು ಬೇಸರದ ಸಂಗತಿ. ಕಾಫಿ ದರದಲ್ಲಿ ಏರಿಳಿತ ಸಾಮಾನ್ಯವಾಗಿದ್ದು, ರೈತರು ವೈಜ್ಞಾನಿಕ ಕೃಷಿ ಪದ್ಧತಿ ಅನುಸರಿಸಿ ಗುಣಮಟ್ಟದ ಉತ್ಪಾದನೆಗೆ ಒತ್ತು ನೀಡಬೇಕೆಂದು ಭಾರತೀಯ ಕಾಫಿ ಮಂಡಳಿಯ ಅಧ್ಯಕ್ಷ ಎಂ.ಜೆ.ದಿನೇಶ್ ತಿಳಿಸಿದರು.

# ದುರ್ಬಲ ಹೈಕಮಾಂಡ್ ನಿಂದಲೇ ಅಧಿಕಾರಕ್ಕಾಗಿ ಕಿತ್ತಾಟ

» ಮೊದಲನೇ ಪುಟದಿಂದ

ಪಡಿಸಲಿ. ಮಾನ ಮರ್ಯಾದೆ ಇದ್ದರೆ ಹೆಚ್ಚುವರಿ ತೆರಿಗೆ ತೆಗೆದುಕೊಳ್ಳುವುದಿಲ್ಲವೆಂದು ಘೋಷಿಸಲಿ ಎಂದು ಸವಾಲು ಹಾಕಿದರು.

ಕಳೆದ ಎರಡು ವರ್ಷಗಳಿಂದ ಆಡಳಿತ ಯಂತ್ರ ಸಂಪೂರ್ಣ ಕುಸಿದಿದ್ದು, ರಾಜ್ಯದಲ್ಲಿ ಅಧಿಕಾರಿಗಳು ಆಡಿದ್ದೇ ಆಟವಾಗಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು ತಕ್ಷಣವೇ ದೆಹಲಿಯಿಂದ ಬಂದು ಜನರ ಸಮಸ್ಯೆಯನ್ನು ಬಗೆಹರಿಸಲಿ. ಕಾಂಗ್ರೆಸ್ ನಾಟಕ ಸದ್ಯಕ್ಕೆ ನಿಲ್ಲುವಂತೆ ಕಾಣುತ್ತಿಲ್ಲ, ಮಂತ್ರಿಗಳ ಬಳಿಕ ಇದೀಗ ಶಾಸಕರೂ ದೆಹಲಿಗೆ ತೆರಳಲು ಸಿದ್ಧರಾಗಿದ್ದಾರೆಂದು ಟೀಕಿಸಿದರು.

**ಸಾಲದ ಸುಳಿಯಲ್ಲಿ ರಾಜ್ಯ:** ಅವೈಜ್ಞಾನಿಕ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಸಾಲದ ಸುಳಿಗೆ ತಳ್ಳಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸರ್ಕಾರ ನಿರಂತರ ಸಾಲ ಮಾಡುತ್ತಿದೆ. ಹಣವಿ ಲ್ಲದೇ ಈಗ ಗ್ಯಾರಂಟಿಗಳಿಗೂ ಕತ್ತರಿ ಹಾಕು ತ್ತಿದ್ದಾರೆ. ರಾಜ್ಯದ ಸಾಲದ ಪ್ರಮಾಣ ಈಗಾಗಲೇ 7 ಲಕ್ಷ ಕೋಟಿ ರೂ. ದಾಟಿದೆ. ಮುಂದಿನ ವರ್ಷಕ್ಕೆ ಎಂಟೂವರೆ ಲಕ್ಷ ಕೋಟಿಗೆ ತಲುಪುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ತೊರೆಯುವ ಹೊತ್ತಿಗೆ ರಾಜ್ಯದ ಸಾಲದ ಮೊತ್ತ ಹತ್ತು ಲಕ್ಷ ಕೋಟಿಗೆ ಏರಬಹುದೆಂದು ಹೇಳಿದರು.

ಇದುವರೆಗೆ ರಾಜ್ಯ ಕಂಡ ಮುಖ್ಯಮಂತ್ರಿಗಳಲ್ಲಿ ಅತೀ ಹೆಚ್ಚು ಸಾಲ ಮಾಡಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ನಾವು ಗ್ಯಾರಂಟಿ ಯೋಜನೆಗಳಿಗೆ ವಿರೋಧಿಗಳಲ್ಲ, ಆದರೆ, ಯೋಜನೆಗಳಿಗೆ ಸಮರ್ಪಕ ಆರ್ಥಿಕ ರೂಪುರೇಷೆ ಇಲ್ಲದೆ ಘೋಷಣೆ ಮಾಡಿದ ಪರಿಣಾಮ ರಾಜ್ಯದ ಆರ್ಥಿಕ ಸ್ಥಿತಿ ಕುಸಿದಿದೆ. ಗ್ಯಾರಂಟಿಗಳಿಗೆ ಹಣ ಹೊಂದಿಸಲು ಸರ್ಕಾರ ಈಗ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸುತ್ತಿದ್ದು, ಹಲವಾರು ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್‌ಗೆ ಪರಿವರ್ತಿಸುವ ಮೂಲಕ ಬಡವರ ಅನ್ನಕ್ಕೂ ಕನ್ನ ಹಾಕುವ ಪರಿಸ್ಥಿತಿ ಕಾಂಗ್ರೆಸ್ ಸರ್ಕಾರಕ್ಕೆ ಬಂದಿದೆ. ಕಳೆದ ಮೂರು ತಿಂಗಳಿನಿಂದ ವೃದ್ಧಾಪ್ಯ ವೇತನ ನೀಡಲಾಗಿಲ್ಲ ಎಂದರು.

ವಿಧಾನ ಪರಿಷತ್ ಸದಸ್ಯ ರವಿಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ, ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಉಪಸ್ಥಿತರಿದ್ದರು.

# ಗೋ ಹತ್ಯೆ ನಿಷೇಧ ಕಾಯ್ದೆ ವಾಪಾಸ್‌ಗೆ ಆಗ್ರಹಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ಈ ಕಾಯ್ದೆಯನ್ನು ದುರುಪ ಯೋಗಪಡಿಸಿಕೊಂಡು ಕೆಲ ಹಿಂದುತ್ವವಾದಿ ಶಕ್ತಿಗಳು ಮತ್ತು ಭಜರಂಗದಳದಂತಹ ಸಂಘಟನೆಗಳು ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುವ ಮತ್ತು ನೈತಿಕ ಪೊಲೀಸ್‌ಗಿರಿ ತೋರುವ ಕೆಲಸಕ್ಕೂ ಮುಂದಾಗಿದ್ದಾರೆ. ಭಾರತದ ಸಂವಿಧಾನದಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಗೂ ತನಗೆ ಬೇಕಾದ ಧರ್ಮವನ್ನು ಅನುಸರಿಸುವ ಮತ್ತು ತನಗೆ ಬೇಕಾದ ಆಹಾರವನ್ನು ತಿನ್ನುವ ಮುಕ್ತ ಸ್ವಾತಂತ್ರವನ್ನು ನೀಡಲಾಗಿದೆ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಬಕ್ರೀದ್ ಹಬ್ಬದ ಹಿನ್ನಲೆ ಕುರ್ಬಾನಿಗೆ ಗೋವುಗಳನ್ನು ಬಳಸಬಾರದೆಂಬ ಜಿಲ್ಲಾಡಳಿತದ ಸೂಚನೆ ಒಂದು ಕಡೆ ಅಲ್ಪಸಂಖ್ಯಾತರು ಮತ್ತು ದನದ ಮಾಂಸವನ್ನು ಉಪಯೋಗಿಸುವ ಎಲ್ಲರ ಆಹಾರದ ಹಕ್ಕಿನ ಮೇಲಿನ ದಾಳಿಯಾಗಿದೆ ಮತ್ತು ಇದು ನೇರವಾಗಿ ರೈತ ಸಮುದಾಯದ ಮೇಲೆ ಪರಿಣಾಮ ಬೀರುತ್ತದೆ. ಜಿಲ್ಲಾಡಳಿತ ಈ ನಿಲುವುಗಳನ್ನು ಸಡಿಲಗೊಳಿಸಿ, ರೈತರು ತಮ್ಮ ರಾಸುಗಳನ್ನು ಮುಕ್ತವಾಗಿ ಮಾರಾಟ ಮಾಡುವ ವ್ಯವಸ್ಥೆಯನ್ನು ಕಲ್ಪಿಸಿ ಕೊಡಬೇಕು ಹಾಗು ಧರ್ಮದ ಹೆಸರಿನಲ್ಲಿ ಕಾನೂನನ್ನು ಕೈಗೆತ್ತಿ ಕೊಳ್ಳುವ, ಕೋಮು ಸೌಹಾರ್ದತೆಯನ್ನು ಕದಡುವ ಹಿಂದುತ್ವವಾದಿ ಶಕ್ತಿಗಳು ಮತ್ತು ಸಂಘಟನೆಗಳನ್ನು ನಿಯಂತ್ರಿಸಬೇಕೆಂದು ಒತ್ತಾಯಿಸಿದರು.

ರೈತ ಸಂಘದ ಮುಖಂಡರಾದ ಬಾಬು, ರವಿ ಆನೆಕೆರೆ, ಪವಿತ್ರ, ಮಂಜುನಾಥ್ ಹೆಚ್.ಆರ್. ನವೀನ್‌ಕುಮಾರ್, ಧರ್ಮೇಶ್, ಟಿ.ಆರ್. ವಿಜಯ್‌ಕುಮಾರ್, ಹೆಚ್.ಕೆ.ಸಂದೇಶ್, ರಾಜಶೇಖರ್ ಹುಲಿಕಲ್ ಮತ್ತಿತರರು ಹಾಜರಿದ್ದರು.

# 1 ಕೋ. ರೂ. ವೆಚ್ಚದ ಕಾಮಗಾರಿಗೆ ಚಾಲನೆ



• ಪ್ರಜೋದಯ ವರದಿ

**ಆಲೂರು:** ಆಲೂರು: ತಾಲ್ಲೂಕಿನ ದೊಡ್ಡ ಕಣಗಾಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಮಾದೇವರಹಳ್ಳಿ ಗ್ರಾಮದ ಪರಿಮಿತಿಯಲ್ಲಿ 1 ಕೋ. ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಅವರು ಮಂಗಳವಾರ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಸಾವಿರಾರು ವರ್ಷಗಳ ಇತಿಹಾಸವಿರುವ ಪುರಾತನ ಶ್ರೀ ಚನ್ನಕೇಶವ ಸ್ವಾಮಿ ದೇವಾಲಯಕ್ಕೆ 80 ಅಡಿ ರಸ್ತೆಗೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ದೇವಾಲಯದ ಜೀರ್ಣೋದ್ಧಾರದ ಕುರಿತು ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಬಿಜೆಪಿ ಕಾರ್ಯಕರ್ತರಾದ ಯು.ಜಿ.ಜಯರಾಮ್, ಸಹಾಯಕ ಇಂಜಿನೀಯರ್ ಅರುಣ್ ಕುಮಾರ್, ಜಿಲ್ಲಾ ಅರಸು ಸಂಘದ ಅಧ್ಯಕ್ಷ ಯೋಗರಾಜ್ ಅರಸು, ಉಮಾದೇವರಹಳ್ಳಿ ಗ್ರಾಮಸ್ಥರು ಇತರರು ಉಪಸ್ಥಿತರಿದ್ದರು.

## ಜೂನ್ 5ರಂದು ಹಸಿರು ಹಾಸನ ಅಭಿಯಾನ: ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ

# ಬೇಲೂರಿನಲ್ಲಿ 50 ಸಾವಿರ ಸಸಿ ನೆಡುವ ಗುರಿ

• ಪ್ರಜೋದಯ ವರದಿ

**ಬೇಲೂರು:** ಜಿಲ್ಲೆಯನ್ನು ಇನ್ನಷ್ಟು ಹಸಿರಾಗಿಸುವ ಉದ್ದೇಶದಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜೂನ್ 5ರಂದು ಹಸಿರು ಹಾಸನ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಬೇಲೂರು ತಾಲ್ಲೂಕಿನಲ್ಲಿ 50 ಸಾವಿರ ಸಸಿಗಳನ್ನು ನೆಡುವ ಗುರಿ ಹೊಂದಲಾಗಿದೆ ಎಂದು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ತಿಳಿಸಿದರು.

ಪಟ್ಟಣದ ಪುರಸಭೆಯ ವೇಲಾಪುರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಹಸಿರು ಹಾಸನ ಪೂರ್ವಭಾವಿ ಸಭೆಯಲ್ಲಿ ಮಾತ ನಾಡಿದ ಅವರು, ಜಿಲ್ಲಾಧಿಕಾರಿ ಪರಿಸರ ದಿನಾಚರಣೆಯ ಅಂಗವಾಗಿ ವಿನೂತನ ಕಾರ್ಯಕ್ರಮ ರೂಪಿಸಿದ್ದು, ಶಿಲ್ಪಕಲೆಯ ನಾಡು ಬೇಲೂರಿನಲ್ಲಿ ವ್ಯಾಪಕ ಪ್ರಮಾಣದಲ್ಲಿ ಸಸಿ ನೆಡುವ ಕಾರ್ಯ ಕೈಗೊಳ್ಳಲಾಗುತ್ತಿದೆ. ಕ್ರೀಡಾಂಗಣ, ಜೂನಿಯರ್ ಕಾಲೇಜು, ಪಟ್ಟಣದ ಉದ್ಯಾನವನಗಳು ಹಾಗು ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದರು.

ಒತ್ತುವರಿ ತಡೆಗಟ್ಟುವ ಉದ್ದೇಶದಿಂದ ರುದ್ರಭೂಮಿಗಳಲ್ಲಿಯೂ ಸಸಿ ನೆಡುವ ಯೋಜನೆ ಜಾರಿಗೊಳ್ಳಲಿದೆ. ಈ ಅಭಿಯಾನದ ವೆಚ್ಚವನ್ನು ಸ್ಥಳೀಯ ಪುರಸಭೆ ಹಾಗು ಗ್ರಾಮ ಪಂಚಾಯಿತಿಗಳು ಭರಿಸಲಿವೆ. ಸಾಲುಮರದ ತಿಮ್ಮಕ್ಕ ಅವರ ಹೆಸರನ್ನು ಶಾಶ್ವತಗೊಳಿಸುವ ನಿಟ್ಟಿನಲ್ಲಿ ಪುಷ್ಪಗಿರಿ ತಪ್ಪಲಿನ 20 ಎಕರೆ ಪ್ರದೇಶದಲ್ಲಿ ತಿಮ್ಮಕ್ಕ ಸ್ಮಾರಕ ಹಾಗು ಉದ್ಯಾನವನ ನಿರ್ಮಿಸಲು ಅರಣ್ಯ ಸಚಿವ ಈಶ್ವರ್ ಖಂಡ್ರೆ 25 ಕೋಟಿ ರೂ. ಅನುದಾನ ಬಿಡುಗಡೆ ಮಾಡಲು ಮುಂದಾಗಿದ್ದಾರೆ ಎಂದು ಹೇಳಿದರು.



ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸತೀಶ್‌ಕುಮಾರ್ ಅವರು ಮಾತನಾಡಿ, ತಾಲ್ಲೂಕಿನ 37 ಗ್ರಾಮ ಪಂಚಾಯಿತಿಗಳ ಶಾಲಾ ಆವರಣ, ರುದ್ರಭೂಮಿ ಹಾಗೂ ಸರ್ಕಾರಿ ಜಾಗಗಳನ್ನು ಸಸಿ ನೆಡುವುದಕ್ಕಾಗಿ ಗುರುತಿಸಲಾಗಿದೆ. ಪ್ರತಿಯೊಬ್ಬರೂ ಗಿಡ ನೆಟ್ಟು ಅವುಗಳ ಪೋಷಣೆಗೆ ಮುಂದಾಗಿ ಬೇಲೂರನ್ನು ಗ್ರೀನ್ ಸಿಟಿಯಾಗಿಸಬೇಕೆಂದು ಕರೆ ನೀಡಿದರು.

ಪುರಸಭಾ ಸದಸ್ಯ ಜಮಾಲುದ್ದೀನ್ ಮಾತನಾಡಿ, ಜಿಲ್ಲಾಡಳಿತ ಹಮ್ಮಿಕೊಂಡಿರುವ ಹಸಿರು ಹಾಸನ ಕಾರ್ಯಕ್ರಮ ಶ್ಲಾಘನೀಯವಾಗಿದೆ. ಪಟ್ಟಣದ 23ವಾರ್ಡ್‌ಗಳಲ್ಲಿ ಭಸ್ಮೀಕರಣ ಹೊಂಡ, ಚನ್ನಕೇಶವ ದೇವಾಲಯ ಹಿಂಭಾಗ ಹಾಗೂ ವಿವಿಧ ಕಾಲೇಜು ಆವರಣಗಳಲ್ಲಿ ಪರಿಸರ ಸಂರಕ್ಷಣಾ ಕಾರ್ಯಕ್ಕೆ ಸಾರ್ವಜನಿಕರು ಸ್ವಯಂಪ್ರೇರಿತವಾಗಿ ಕೈಜೋಡಿಸಬೇಕೆಂದು ಹೇಳಿದರು.

ಪುರಸಭಾ ಅಧ್ಯಕ್ಷ ಅಕ್ರಮ್ ಶರೀಫ್ ಅವರು ಮಾತನಾಡಿ, ಪುರಸಭೆ ವ್ಯಾಪ್ತಿಯಲ್ಲಿ 2 ಸಾವಿರ ಗಿಡಗಳನ್ನು ನೆಡುವ ಯೋಜನೆ ರೂಪಿಸಲಾಗಿದೆ. ಈಗಾಗಲೇ ಅರಣ್ಯ ಇಲಾಖೆ ಗಿಡ ಖರೀದಿಸಲು ಸೂಚನೆ ನೀಡಿದ್ದು, ಇಲಾಖೆಯಿಂದ ಗಿಡಗಳನ್ನು ಪೂರೈಸಿದರೆ 5ಸಾವಿರ ಸಸಿಗಳನ್ನು ನೆಡುವ ಗುರಿಯನ್ನು ಸಾಧಿಸಲು ಸಿದ್ಧವಿದ್ದೇವೆಂದು ಹೇಳಿದರು. ಸಭೆಯಲ್ಲಿ ಕರವೇ ಅಧ್ಯಕ್ಷ ಚಂದ್ರಶೇಖರ್, ಪುರಸಭೆ ಮುಖ್ಯಾಧಿಕಾರಿ ಬಸವರಾಜ್ ಶಿವಗಾವಿ, ಪುರಸಭಾ ಸದಸ್ಯರಾದ ತೀರ್ಥಕುಮಾರಿ ವೆಂಕಟೇಶ್, ಜಗದೀಶ್, ಅಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

# ಮೇ 30ರಂದು ಅರಕಲಗೂಡಿನಲ್ಲಿ ಅಂಬೇಡ್ಕರ್ ಹಬ್ಬ




• ಪ್ರಜೋದಯ ವರದಿ

**ಹಾಸನ:** ದಲಿತ ಸಂಘಟನೆಗಳ ಒಕ್ಕೂಟದಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಅರಕಲಗೂಡು ಪಟ್ಟಣದಲ್ಲಿ ಮೇ 30ರಂದು ಅಂಬೇಡ್ಕರ್ ಹಬ್ಬ ಹಮ್ಮಿಕೊಳ್ಳಲಾಗಿದೆ ಎಂದು ಆಚರಣಾ ಸಮಿತಿ ಕಾರ್ಯಾಧ್ಯಕ್ಷ ಬಿ.ಸಿ.ರಾಜೇಶ್ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮಕ್ಕೆ ಅಂಬೇಡ್ಕರ್ ಅವರ ಮೊಮ್ಮಗ ಆನಂದ್ ರಾಜ್ ಯಶ್ವಂತ್ ಅಂಬೇಡ್ಕರ್ ಮಹಾರಾಷ್ಟ್ರದಿಂದ ಆಗಮಿಸಲಿದ್ದಾರೆ. ಬೀದರ್‌ನ ಆಯುಷ್ಮಾನ್ ವರಜ್ಯೋತಿ ಬಂತೆ ಅವರು ಸಾನಿಧ್ಯ ವಹಿಸಲಿದ್ದಾರೆ. ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹಾದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಗ್ರಾಮೀಣ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ ಖರ್ಗೆ ಭಾಗವಹಿಸಿ ಅಂಬೇಡ್ಕರ್ ಅವರ ವಿಚಾರ ಮಂಡನೆ ಮಾಡುವವರೆಂದು ವಿವರಿಸಿದರು.

ಜಿಲ್ಲೆಯಲ್ಲಿ 5 ಲಕ್ಷಕ್ಕೂ ಹೆಚ್ಚು ದಲಿತ ಸಮುದಾಯದವರಿದ್ದರೂ, ಸ್ವಾತಂತ್ರ್ಯ ಬಂದು 79 ವರ್ಷ ಕಳೆದರೂ, ರಾಜಕೀಯ ಪ್ರಾತಿನಿಧ್ಯದಿಂದ ವಂಚಿತರಾಗಿದ್ದಾರೆ. ಸಂವಿಧಾನದತ್ತ ವಾದ ಹಕ್ಕು, ಅವಕಾಶಗಳು ಎಲ್ಲರಿಗೂ ಸಮಾನವಾಗಿ ದಕ್ಕಬೇಕೆಂಬ ಅಂಬೇಡ್ಕರ್ ಅವರ ಆಶಯದಂತೆ ಜಾಗೃತಿ ಮೂಡಿಸಲು ದಲಿತ ಸಂಘಟನೆಗಳ ಒಕ್ಕೂಟ ಹಮ್ಮಿಕೊಂಡಿದೆ ಎಂದು ತಿಳಿಸಿದರು.

ಜಿಲ್ಲೆಯ ದಲಿತ ಸಂಘಟನೆಗಳ ಮುಖಂಡರು, ಸರ್ಕಾರಿ ನೌಕರರು, ಖಾಸಗಿ ನೌಕರರು, ವಕೀಲರು, ಗುತ್ತಿಗೆದಾರರು, ಉದ್ಯಮಿಗಳು, ಚಿಂತಕರು, ಸಾಮಾಜಿಕ ಹೋರಾಟ ಗಾರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ದಲಿತ ಮುಖಂಡ ಹೆಚ್.ಕೆ.ಸಂದೇಶ್, ಆಚರಣಾ ಸಮಿತಿ ಅಧ್ಯಕ್ಷ ಜವರಯ್ಯ, ಉಪಾಧ್ಯಕ್ಷ ಲಿಂಗರಾಜು, ಕಾರ್ಯದರ್ಶಿ ಗಣೇಶ್ ವೇಲಾಪುರಿ ಇದ್ದರು.

# ಮೇಕೆದಾಟು ಯೋಜನೆ ಸಂಬಂಧ ಕರ್ನಾಟಕಕ್ಕೆ ಶುಭಸುದ್ದಿ: ಡಿಕೆಶಿ

• ಪ್ರಜೋದಯ ವರದಿ

**ನವದೆಹಲಿ:** ಮೇಕೆದಾಟು ಯೋಜನೆ ವಿಚಾರವಾಗಿ ತಮಿಳುನಾಡು ಸಲ್ಲಿಸಿದ್ದ ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ವಜಾಗೊಳಿಸಿದೆ. ಇದು ಕರ್ನಾಟಕ ಪಾಲಿಗೆ ಶುಭಸುದ್ದಿ. ಕರ್ನಾಟಕ ರಾಜ್ಯದ ಜನರ ಪರವಾಗಿ ನಾವು ಸುಪ್ರೀಂ ಕೋರ್ಟ್‌ಗೆ ಧನ್ಯವಾದ ಅರ್ಪಿಸುತ್ತೇವೆಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ದೆಹಲಿಯ ಕರ್ನಾಟಕ ಭವನದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಪ್ರೀಂ ಕೋರ್ಟ್ ಈ ಹಿಂದಿನ ಆದೇಶದಲ್ಲೇ ನಮಗೆ ಸ್ಪಷ್ಟ ಸೂಚನೆ ನೀಡಿದ್ದು ತಮಿಳುನಾಡಿನ ಪಾಲಿನ 177 ಟಿಎಂಸಿ ನೀರನ್ನು ಹರಿಸಬೇಕೆಂದು ಷರತ್ತು ವಿಧಿಸಿದೆ. ಈಗ ಈ ಯೋಜನೆ ಕುರಿತು ತೀರ್ಮಾನ ಮಾಡಬೇಕಿರುವುದು ಕೇಂದ್ರ ಸರ್ಕಾರ. ನಾವು ಪರಿಷ್ಕೃತ ಡಿಪಿಆರ್ ಸಲ್ಲಿಕೆ ಪ್ರಕ್ರಿಯೆಯಲ್ಲಿದ್ದೇವೆಂದು ತಿಳಿಸಿದರು.

# ಕರ್ನಾಟಕದ ಡಿಪಿಆರ್ ತಿರಸ್ಕರಿಸಿ: ಮೋದಿಗೆ ಸಿಎಂ ವಿಜಯ್ ಪತ್ರ

• ಪ್ರಜೋದಯ ವರದಿ



**ಚೆನ್ನೈ:** ಕರ್ನಾಟಕ ಸರ್ಕಾರ ಉದ್ದೇಶಿಸಿರುವ ಮೇಕೆದಾಟು ಯೋಜನೆಯ ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ತಿರಸ್ಕರಿಸುವಂತೆ ತಮಿಳು ನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಈ ಸಂಬಂಧ ಸುದೀರ್ಘ ಪತ್ರ ಬರೆದಿರುವ ಮುಖ್ಯಮಂತ್ರಿ ವಿಜಯ್, ತಮಿಳುನಾಡಿನ ಆಕ್ಷೇಪಣೆಗಳನ್ನು ಪರಿಗಣಿಸದೆ, ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಕರ್ನಾಟಕದ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿರುವುದು ತಮಗೆ ಆಶ್ಚರ್ಯ ಮೂಡಿಸಿದೆಂದು ಹೇಳಿದ್ದಾರೆ.

ಕರ್ನಾಟಕ ಸಿದ್ಧಪಡಿಸಿರುವ ಡಿಪಿಆರ್, ಕಾವೇರಿ ನದಿ ನೀರು ವಿವಾದ ನ್ಯಾಯಾಧೀಕರಣದ ಅಂತಿಮ ಆದೇಶ ಹಾಗೂ ಸುಪ್ರೀಂ ಕೋರ್ಟ್‌ನ ತೀರ್ಪಿಗೆ ಸಂಪೂರ್ಣ ವಿರುದ್ಧವಾಗಿದೆ. ಆದ್ದರಿಂದ ತಕ್ಷಣವೇ ಈ ವರದಿಯನ್ನು ತಿರಸ್ಕರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡ ಬೇಕೆಂದು ಪ್ರಧಾನಿ ಅವರನ್ನು ಒತ್ತಾಯಿಸಿದ್ದಾರೆ. ಜೊತೆಗೆ ಇತರೆ ರಾಜ್ಯಗಳ (ತಮಿಳುನಾಡು, ಕೇರಳ, ಪುದುಚೇರಿ) ಒಪ್ಪಿಗೆಯಿಲ್ಲದೆ ಯಾವುದೇ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳದಂತೆ ಕರ್ನಾಟಕ ಸರ್ಕಾರಕ್ಕೆ ಸೂಕ್ತ ಸಲಹೆ ನೀಡಬೇಕೆಂದು ಪತ್ರದಲ್ಲಿ ವಿನಂತಿಸಿದ್ದಾರೆ.

ಮೇಕೆದಾಟು ಜಲಾಶಯ ನಿರ್ಮಾಣಕ್ಕಾಗಿ ಭೂಮಿ ಪೂಜೆ ನೆರವೇರಿಸುವ ಕುರಿತಾದ ಪ್ರಕಟಣೆಗಳು ಮತ್ತು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗಳು ತಮಿಳುನಾಡಿನ ಲಕ್ಷಾಂತರ ರೈತರಲ್ಲಿ ತೀವ್ರ ಆತಂಕ ಮೂಡಿಸಿದೆ ಎಂದು ವಿಜಯ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸುಮಾರು ಮೂರು ದಶಕಗಳ ಕಾಲ ನಡೆದ ಸುದೀರ್ಘ ಕಾನೂನು ಹೋರಾಟದ ನಂತರ ಸೂಕ್ಷ್ಮ ಕಾವೇರಿ ನೀರಿನ ವಿವಾದಕ್ಕೆ ಪರಿಹಾರ ಸಿಕ್ಕಿದ್ದು, 2018 ಫೆಬ್ರುವರಿ 16ರ ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಪ್ರಸ್ತುತ ನೀರು ಹಂಚಿಕೆ ಪ್ರಕ್ರಿಯೆ ನಡೆಯುತ್ತಿದೆಂದು ಮುಖ್ಯಮಂತ್ರಿ ವಿಜಯ್ ಹೇಳಿದ್ದಾರೆ.

# ವಿರಳ ಖನಿಜ ಒಪ್ಪಂದಕ್ಕೆ ಭಾರತ-ಅಮೇರಿಕಾ ಸಹಿ

• ಪ್ರಜೋದಯ ವರದಿ

## ಚೀನಾ ಏಕಸ್ವಾಮ್ಯಕ್ಕೆ ತಡೆ



**ನವದೆಹಲಿ:** ವಿರಳ ಖನಿಜಗಳ ರಫ್ತಿನ ಮೇಲಿನ ಚೀನಾ ಏಕಸ್ವಾಮ್ಯವನ್ನು ತಡೆಯುವ ನಿಟ್ಟಿನಲ್ಲಿ ಮಂಗಳವಾರ ಈ ಕುರಿತ ಒಪ್ಪಂದಕ್ಕೆ ಭಾರತ ಮತ್ತು ಅಮೇರಿಕಾ ಸಹಿ ಹಾಕಿವೆ. ವಿರಳ ಖನಿಜಗಳ ಗಣಿಗಾರಿಕೆ, ಸಂಸ್ಕರಣೆ, ಪೂರೈಕೆಯನ್ನು ಖಚಿತಪಡಿಸಿಕೊಳ್ಳುವ ಈ ಚೌಕಟ್ಟಿಗೆ ನವದೆಹಲಿಯಲ್ಲಿ ನಡೆದ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಸಹಿ ಹಾಕಲಾಯಿತು.

ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೋ ಅವರ ಸಮ್ಮುಖದಲ್ಲಿ ಮಾತನಾಡಿದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್, ಈ ಒಪ್ಪಂದ ಅತ್ಯಂತ ಸಕಾಲಿಕ ಮತ್ತು ನಿರ್ಣಾಯಕವಾಗಿದೆ ಎಂದು ಹೇಳಿದ್ದಾರೆ.

ಈ ಚೌಕಟ್ಟು ಗಣಿಗಾರಿಕೆ, ಸಂಸ್ಕರಣೆ, ಮರುಬಳಕೆ ಸೇರಿ ವಿರಳ ಖನಿಜಗಳ ಪೂರೈಕೆ ಸರಪಳಿಯಲ್ಲಿ ನಮ್ಮ ಸಹಕಾರವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಎಂದಿದ್ದಾರೆ. ತಮ್ಮ ಭಾಷಣದಲ್ಲಿ ರೂಬಿಯೋ, ಅಮೇರಿಕಾ ಮತ್ತು ಭಾರತದ ನಡುವಿನ ವ್ಯೂಹಾತ್ಮಕ ಪಾಲುದಾರಿಕೆ ಮತ್ತು ಅದು ಉಭಯ ದೇಶಗಳ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಎಷ್ಟು ಮುಖ್ಯ ಎಂಬುದನ್ನು ಒತ್ತಿ ಹೇಳಿದ್ದಾರೆ.

ಒಪ್ಪಂದಕ್ಕೆ ಸಹಿ ಹಾಕಿದ್ದನ್ನು ಉಲ್ಲೇಖಿಸಿದ ಅವರು, ನಾವು ಇದಕ್ಕೆ ಸಹಿ ಹಾಕಲು ಸಾಧ್ಯವಾಗಿದ್ದಕ್ಕೆ ನನಗೆ ಸಂತೋಷವಾಗಿದೆ. ಇದು ಒಂದು ಪ್ರಮುಖ ಒಪ್ಪಂದವಾಗಿರುವುದರ ಜೊತೆಗೆ, ಅಮೇರಿಕಾ ಮತ್ತು ಭಾರತದ ನಡುವಿನ ವ್ಯೂಹಾತ್ಮಕ ಪಾಲುದಾರಿಕೆಗೆ ಒಂದು ಸ್ಪಷ್ಟ ಉದಾಹರಣೆಯಾಗಿದೆ ಎಂದು ಹೇಳಿದ್ದಾರೆ.

ವಿರಳ ಖನಿಜಗಳ ವಿಷಯದಲ್ಲಿ ಏಕಸ್ವಾಮ್ಯಕ್ಕೆ ಅವಕಾಶವಿಲ್ಲ. ಏಕಸ್ವಾಮ್ಯವು ವಿರಳ ಖನಿಜಗಳ ಪೂರೈಕೆಯನ್ನು ನಿಯಂತ್ರಿಸುವ ಮೂಲಕ ಸಾರ್ವಭೌಮ ರಾಷ್ಟ್ರಗಳನ್ನು ಹತೋಟಿಗೆ ತೆಗೆದುಕೊಳ್ಳುವ ಸಾಧ್ಯತೆಯಿದೆ. ಈ ಕಾರಣಕ್ಕಾಗಿ ಇಂದು ನಾವು ಸಹಿ ಹಾಕಿದ್ದೇವೆಂದು ಹೇಳಿದ್ದಾರೆ.

ಲಿಥಿಯಂ, ಕೋಬಾಲ್ಟ್, ನಿಕೆಲ್, ತಾಮ್ರ, ಗ್ರ್ಯಾಫೈಟ್ ಮತ್ತು 17 ವಿರಳ ಲೋಹಗಳನ್ನು ವಿರಳ ಖನಿಜಗಳೆಂದು ಕರೆಯಲಾಗುತ್ತದೆ. ಇವಿ ಬ್ಯಾಟರಿ, ಸೆಮಿಕಂಡಕ್ಟರ್‌ಗಳ ತಯಾರಿಕೆಗೆ ಇವು ಮುಖ್ಯವಾಗಿವೆ.

# ಕಾರ್ಯಕರ್ತರಿಗೆ ನಾಯಕತ್ವ ನೀಡುವ ಏಕೈಕ ಪಕ್ಷ ಬಿಜೆಪಿ

» ಮೊದಲನೇ ಪುಟದಿಂದ

ಸಮಯದಲ್ಲಿ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಪಕ್ಷದ ಗೆಲುವಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಬಿಜೆಪಿಗೆ ದೇವರ ಆಶೀರ್ವಾದ ಮತ್ತು ಜನರ ಬೆಂಬಲ ಎರಡೂ ಇದೆ. ಇದೇ ಕಾರಣಕ್ಕೆ ಇತರ ಪಕ್ಷಗಳಿಂದ ಬಿಜೆಪಿ ವಿಭಿನ್ನವಾಗಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಮಾತನಾಡಿ, ತುರ್ತು ಪರಿಸ್ಥಿತಿ ಹಾಗೂ ಕರ ಸೇವೆಯಂತಹ ಕಷ್ಟಕಾಲದಲ್ಲಿ ಹೋರಾಟ ನಡೆಸಿರುವುದು ಬಿಜೆಪಿ ಕಾರ್ಯಕರ್ತರು ಮಾತ್ರ. ರಾಜಕಾರಣಕ್ಕಿಂತ ರಾಷ್ಟ್ರವೇ ದೊಡ್ಡದು ಎಂದು ನಂಬಿರುವುದು ಬಿಜೆಪಿಯ ವಿಶೇಷತೆ. ಕೆ. ಆರ್.ಪೇಟೆ ಹಾಗೂ ಶಿರಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಹಾಸನ ಜಿಲ್ಲೆಯ ಕಾರ್ಯಕರ್ತರು ತೆರಳಿ ಬಿಜೆಪಿಯನ್ನು ಬಲಪಡಿಸಿದ ಇತಿಹಾಸವಿದೆ. ಸಿಮೆಂಟ್ ಮಂಜು ಅವರಂತಹ ಸಾಮಾನ್ಯ ಕಾರ್ಯಕರ್ತರು ಶಾಸಕರಾಗಿರುವುದು ಬಿಜೆಪಿಯಲ್ಲಿ ಮಾತ್ರ ಸಾಧ್ಯ. ಕಾರ್ಯಕರ್ತರು ಪಕ್ಷಕ್ಕಾಗಿ ನಿರಂತರವಾಗಿ ಶ್ರಮಿಸಬೇಕು. ಪಕ್ಷ ಅಧಿಕಾರಕ್ಕೆ ಬಂದಾಗ ಮುಂದಿನ ದಿನಗಳಲ್ಲಿ ಕಾರ್ಯಕರ್ತರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ ಎಂದು ಹೇಳಿದರು.

ಎರಡು ದಿನಗಳ ಕಾಲ ನಡೆದ ಶಿಬಿರದಲ್ಲಿ ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯ ಗಣೇಶ್ ಕಾರ್ಣಿಕ್, ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಹಾಗೂ ಬಿಜೆಪಿ ರಾಜ್ಯ ವಕ್ತಾರ ಚಂದ್ರಶೇಖರ್ ತರಬೇತಿ ನೀಡಿದರು.

ಸಮಾರೋಪ ಸಮಾರಂಭದಲ್ಲಿ ಬೇಲೂರು ಶಾಸಕ ಹುಲ್ಲಹಳ್ಳಿ ಸುರೇಶ್, ವಿಧಾನ ಪರಿಷತ್ ಸದಸ್ಯ ರವಿಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಗೌಡ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ, ಗಿರೀಶ್ ನಂಬಿಹಳ್ಳಿ, ರಾಜ್ ಕುಮಾರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಅಶ್ವಥ್, ಪಕ್ಷದ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಶೆಡ್‌ಗಳ ತೆರವಿಗೆ ವಿರೋಧ : ಅಧಿಕಾರಿಗಳೊಂದಿಗೆ ವಾಗ್ವಾದ

» ಮೊದಲನೇ ಪುಟದಿಂದ

ನೀಡಲಾಗುತ್ತಿದೆ. ಕೆಲವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು, ಈ ಸಂಬಂಧ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಜೂ.4ರಂದು ವಿಚಾರಣೆ ನಿಗದಿಯಾಗಿರುವ ಹಿನ್ನಲೆ ನಾಲ್ಕು ಅಂಗಡಿಗಳಿಗೆ ಮಾತ್ರ ತಾತ್ಕಾಲಿಕ ತಡೆಯಾಜ್ಞೆ ಇದೆ. ಉಳಿದ ಮಳಿಗೆಗಳಿಗೆ ನೋಟೀಸ್ ನೀಡಿ ಬೀಗ ಹಾಕಿ ತಾಲ್ಲೂಕು ಪಂಚಾಯಿತಿ ಸುಪರ್ದಿಗೆ ಪಡೆಯಲಾಗಿದೆ. ಒಂದು ವಾರದೊಳಗೆ ಅಂಗಡಿಗಳನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸಬೇಕು. ಇಲ್ಲದಿದ್ದರೆ ಜೆಸಿಬಿ ಮೂಲಕ ತೆರವುಗೊಳಿಸಿ ಅದರ ವೆಚ್ಚವನ್ನು ಸಂಬಂಧಪಟ್ಟವರಿಂದಲೇ ವಸೂಲಿ ಮಾಡಲಾಗುವುದೆಂದು ಎಚ್ಚರಿಸಿದರು.

**ವ್ಯಾಪಾರಸ್ಥರ ಆಕ್ರೋಶ**

ವ್ಯಾಪಾರಿಗಳು ಮಾತನಾಡಿ, ಯಾವುದೇ ಪೂರ್ವ ನೋಟೀಸ್ ನೀಡದೆ ಏಕಾಏಕಿ ಅಂಗಡಿಗಳನ್ನು ತೆರವುಗೊಳಿಸಲು ಅಧಿಕಾರಿಗಳು ಮುಂದಾಗಿರುವುದು ದೌರ್ಜನ್ಯವಾಗಿದೆ. ನಾವು ಈಗಾಗಲೇ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದೇವೆ. ನಮಗೆ ನ್ಯಾಯ ದೊರಕಿಸಿಕೊಡಬೇಕು. ಪುರಸಭೆಗೆ ತಲಾ 35 ಸಾವಿರ ನೀಡಿ ಶೆಡ್ ನಿರ್ಮಿಸಿಕೊಂಡಿದ್ದೇವೆ. ನಾವು ಸಣ್ಣಪುಟ್ಟ ವ್ಯಾಪಾರಸ್ಥರಾಗಿದ್ದು, ಈ ವ್ಯಾಪಾರವೇ ನಮ್ಮ ಜೀವನಾಧಾರವಾಗಿದೆ ಎಂದು ಹೇಳಿದರು.

50 ವರ್ಷಗಳಿಂದ ಇಲ್ಲಿ ಸಣ್ಣಪುಟ್ಟ ಬಿದಿರು ವ್ಯಾಪಾರ ನಡೆಸಿಕೊಂಡು ಕುಟುಂಬ ಜೀವನ ಸಾಗಿಸುತ್ತಿರುವ ವ್ಯಾಪಾರಸ್ಥರ ಬದುಕಿನ ಪ್ರಶ್ನೆ ಎದುರಾಗಿದೆ. ಮಾನವೀಯತೆ ದೃಷ್ಟಿಯಿಂದ ಅವರಿಗೆ ಸಹಕಾರ ನೀಡಬೇಕೆಂದು ಬಿದಿರು ಬೆಳೆಗಾರರ ಸಂಘದ ಅಧ್ಯಕ್ಷ ವಿಜಯ್ ಕುಮಾರ್ ಮನವಿ ಮಾಡಿದರು.

# ಸೌಕರ್ಯ ಕಲ್ಪಿಸುವವರೆಗೂ ನಿವೇಶನ ಹಂಚಿಕೆಗೆ ಬಿಡಲ್ಲ

» ಮೊದಲನೇ ಪುಟದಿಂದ

ಇಂದಿಗೂ ವಿದ್ಯುತ್‌ಗಾಗಿ ಅಲ್ಲಿನ ನಿವಾಸಿಗಳು ಪರದಾಡುತ್ತಿದ್ದಾರೆ. ಅಲ್ಲಿನ ಸಮಸ್ಯೆ ಇಲ್ಲಿಯೂ ತಲೆದೋರದಂತೆ ನೋಡಿಕೊಳ್ಳಲು ಮೊದಲು ಮೂಲ ಸೌಲಭ್ಯ ಕಲ್ಪಿಸಿ ನಿವೇಶನಗಳನ್ನು ಹಂಚಿಕೆ ಮಾಡಲಿ ಎಂದು ಹೇಳಿದರು.

ಹುಡಾ ಒಡಂಬಡಿಕೆ ಹಾಗು ಮಾರ್ಗಸೂಚಿಯಂತೆ ಬಡಾವಣೆ ಅಭಿವೃದ್ಧಿ ಮಾಡಿ ನಿವೇಶನ ಹಂಚಿಕೆ ಮಾಡಬೇಕು. ರೈತರ ಮನವಿಗೆ ಹುಡಾದವರು ಮನ್ನಣೆ ನೀಡಬೇಕು. ಇಲ್ಲದೆ ನಿವೇಶನ ಹಂಚಿಕೆ ಮಾಡಿ ಹಣ ವಸೂಲಿ ಮಾಡಿಕೊಳ್ಳಲು ಪ್ರಯತ್ನ ಪಟ್ಟಲ್ಲಿ ನೊಂದ ರೈತರು, ನಿವೇಶನಕ್ಕೆ ಅರ್ಜಿ ಹಾಕಿರುವ ಸಾರ್ವಜನಿಕರು ಪ್ರತಿಭಟನೆ ನಡೆಸುವುದು ಅನಿವಾರ್ಯವೆಂದು ಎಚ್ಚರಿಕೆ ನೀಡಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ದಿನೇಶ್ ಅವರು ಮಾತನಾಡಿ, ದಿನಾಂಕ ಘೋಷಣೆ ಮಾಡುವ ಮುನ್ನ ರೈತರೊಂದಿಗೆ ಸಭೆ ಮಾಡಿಲ್ಲ. ನಿವೇಶನ ಅಚ್ಚುಕಟ್ಟು ಮಾಡದೇ ನಾವು ಹಂಚಲು ಬಿಡುವುದಿಲ್ಲ. ಏನೂ ಸೌಲಭ್ಯ ಕೊಡದೆ ಮನೆ ಕಟ್ಟುವುದಾದರೂ ಹೇಗೆ. ಈಗಾಗಲೇ ಎಸ್.ಎಂ.ಕೆ. ನಗರದ ವ್ಯವಸ್ಥೆ ಹೇಗಿದೆ ಎಂದು ನಾವು ಕಂಡಿದ್ದೇವೆ. ಸೌಲಭ್ಯ ಇಲ್ಲದ ಇಂತಹ ನಿವೇಶನ ಪಡೆದರೆ ಜನರಿಗೂ ತೊಂದರೆ ಆಗಲಿದೆ. ಅವರೂ ಕೂಡ ಪ್ರಶ್ನೆ ಮಾಡಬೇಕು. ನಮ್ಮೆಲ್ಲರ ಮನವಿಗೆ ಸ್ಪಂದಿಸದೆ ಜೂ.18 ರಂದು ನಿವೇಶನ ಹಂಚಿಕೆ ಮಾಡಿದರೆ ಯಾವುದೇ ರೀತಿಯ ಹೋರಾಟಕ್ಕೂ ನಾವು ಸಿದ್ಧವೆಂದು ಎಚ್ಚರಿಕೆ ನೀಡಿದರು.

# ಇರಾನ್ ಜೊತೆ ಶಾಂತಿ ಒಪ್ಪಂದಕ್ಕೆ ಕೆಲ ದಿನಗಳು ಬೇಕು

• ಪ್ರಜೋದಯ ವರದಿ



**ವಾಷಿಂಗ್ಟನ್:** ಇರಾನ್ ಜೊತೆ ಶಾಂತಿ ಒಪ್ಪಂದಕ್ಕೆ ಇನ್ನೂ ಕೆಲವು ದಿನಗಳಾಗಬಹುದೆಂದು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಹೇಳಿದ್ದಾರೆ.

ಅಮೇರಿಕದ ಪಡೆಗಳು ದಕ್ಷಿಣ ಇರಾನ್‌ನಲ್ಲಿ ರಕ್ಷಣಾತ್ಮಕ ದಾಳಿ ನಡೆಸಿದ ನಂತರ ಸಂಘರ್ಷಕ್ಕೆ ಅಂತ್ಯ ಹಾಡುವ ಭರವಸೆಗೆ ಅಡ್ಡಿಯಾಗಿದೆ ಎಂಬ ವರದಿಗಳನ್ನು ಅವರು ತಳ್ಳಿಹಾಕಿದ್ದಾರೆ.

ಯಾವುದೇ ಕದನ ವಿರಾಮ ಉಲ್ಲಂಘನೆ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವ ಹಕ್ಕನ್ನು ಹೊಂದಿದ್ದೇವೆಂದು ಇರಾನ್‌ನ ಐಆರ್‌ಜಿಸಿ ಹೇಳಿದರೆ, ಈ ಪ್ರದೇಶದ ದೇಶಗಳು ಇನ್ನು ಮುಂದೆ ಅಮೇರಿಕಾದ ನೆಲೆಗಳಿಗೆ ಜಾಗ ನೀಡಲು ಸಾಧ್ಯವಿಲ್ಲ ಎಂದು ಪರಮೋಚ್ಚ ನಾಯಕ ಮೊಜ್ತಾಬಾ ಖಮೇನಿ ಹೇಳಿದ್ದಾರೆ.

## ಜಿಲ್ಲಾ ಮುಸ್ಲಿಂ ಸಂಘಟನೆಗಳ ಒಕ್ಕೂಟದ ಸಭೆಯಲ್ಲಿ ನಿರ್ಧಾರ

# ಜಾನುವಾರು ವಧೆ ಮಾಡದಿರಲು ತೀರ್ಮಾನ

• ಪ್ರಜೋದಯ ವರದಿ

**ಹಾಸನ:** ಬಕ್ರೀದ್ ಹಬ್ಬದ ಆಚರಣೆ ಸಂದರ್ಭದಲ್ಲಿ ಜಾನುವಾರು ವಧೆ ಮಾಡದಂತೆ, ಜಾನುವಾರು ಸಂತೆಯಲ್ಲಿ ಭಾಗವಹಿಸದಿರಲು ಜಿಲ್ಲಾ ಮುಸ್ಲಿಂ ಸಂಘಟನೆಗಳ ಒಕ್ಕೂಟ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಒಕ್ಕೂಟದ ರಾಜ್ಯ ಸಂಚಾಲಕ ಅನ್‌ಷಾದ್ ಪಾಳ್ಯ ಅವರು ತಿಳಿಸಿದರು.




ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ರಕೀದ್ ಹಬ್ಬ ಸಂದರ್ಭದಲ್ಲಿ ಧಾರ್ಮಿಕ ಆಚರಣೆಯ ಭಾಗವಾಗಿ ಕುರಿ, ಮೇಕೆ, ಒಂಟೆ ಇತ್ಯಾದಿ ಮಾಂಸ ವಿತರಣೆ ಮಾಡುವುದು ಸಂಪ್ರದಾಯ. ಈ ಹಿಂದಿನ ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಕರ್ನಾಟಕ ಜಾನುವಾರು ವಧೆ ಹಾಗು ಸಾಗಾಟ ಪ್ರತಿಬಂಧಕ ಕಾಯ್ದೆಯನ್ನು ಕೆಲವರು ದುರುಪಯೋಗ ಮಾಡಿಕೊಂಡು ಕಿಡಿಗೇಡಿಗಳು ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿ ಕಾಯ್ದೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂದು ದೂರಿದರು.

ಈ ಕಾಯ್ದೆ ಸಂವಿಧಾನ ವಿರೋಧಿ ಆಶಯಗಳನ್ನು ಹೊಂದಿದೆ. ವಾರದ ಸಂತೆಯಲ್ಲಿ ಜಾನುವಾರು ಖರೀದಿಸಿ ಕೊಂಡೊಯ್ಯುವಂತಿಲ್ಲ. ಮುಸ್ಲಿಂರನ್ನೇ ಗುರಿಯಾಗಿಸಿ ಕೆಲವರು ಹಲ್ಲೆ ಮಾಡುತ್ತಿದ್ದಾರೆ. ಹೀಗಾಗಿ ಜಿಲ್ಲೆಯ ಎಲ್ಲಾ ಮುಸ್ಲಿಂ ಸಂಘಟನೆಗಳ ನಾಯಕರು ಒಂದೆಡೆ ಸೇರಿ ಚರ್ಚಿಸಿ ರಾಜ್ಯದಲ್ಲಿ ಈ ಕಾನೂನನ್ನು ವಾಪಾಸ್ ಪಡೆಯುವವರೆಗೂ ಜಿಲ್ಲೆಯಾದ್ಯಂತ ಗೋವಂಶದ ಪ್ರಾಣಿಗಳನ್ನು ವಧೆ ಮಾಡುವುದಿಲ್ಲ ಹಾಗು ಜಿಲ್ಲೆಯ ಯಾವುದೇ ಜಾನುವಾರು ಸಂತೆಗಳಲ್ಲಿ ಭಾಗವಹಿಸದಂತೆ ತೀರ್ಮಾನ ಮಾಡಲಾಗಿದೆ. ಇದನ್ನು ಮುಸಲ್ಮಾನರು ಪಾಲಿಸ ಬೇಕೆಂದು ಮನವಿ ಮಾಡಿದರು.

ನಗರದಲ್ಲಿ ಮುಸಲ್ಮಾನರು ಹೆಚ್ಚಿರುವ ಭಾಗಗಳಲ್ಲಿ ಜಾನುವಾರು ವಧೆ ಮಾಡಿದರೆ ಮನೆ ಜಪ್ತಿ ಮಾಡುವುದಾಗಿ ಬೆದರಿಕೆಯ ಬ್ಯಾನರ್ ಅಳವಡಿಸಲಾಗಿದೆ. ಈ ಬಗ್ಗೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಮಹಾನಗರ ಪಾಲಿಕೆ ಅಧಿಕಾರಿಗಳನ್ನು ಕೇಳಿ ದರೆ ನಮಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಫ್ಲೆಕ್ಸ್‌ಗಳಲ್ಲಿ ಜಿಲ್ಲಾಡಳಿತದ ಪ್ರಕಟಣೆ ಎಂದು ಮುದ್ರಿಸಲಾಗಿದೆ. ಇದು ಸಂವಿಧಾನ ವಿರೋಧಿ ಮತ್ತು ಕಾನೂನು ಬಾಹಿರ. ಕೂಡಲೇ ಫ್ಲೆಕ್ಸ್ ತೆಗೆಯಬೇಕು. ಈ ಕೆಲಸ ಮಾಡಿರು ವವರನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿದರು.

ಒಕ್ಕೂಟದ ಅಧ್ಯಕ್ಷ ಯೂಸುಫ್ ಖಾನ್, ಗೌರವಾಧ್ಯಕ್ಷ ಅಮೀರ್ ಜಾನ್, ವಕೀಲ ಇಬ್ರಾನ್ ಪಾಷ, ನಯೀಮ್, ಮೆಹರಾಜ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK